


International Journal of Kannada Research
www.kannadajournal.com

**ISSN: 2454–5813**
IJKR 2023; 9(1): 262-269
© 2023 IJKR
www.kannadajournal.com
Received: 18-01-2023
Accepted: 21s-02-2023

**ಡಾ. ಶರಣಪ್ಪ ಬಸವಂತ**
ಕನ್ನಡ ಅತಿಥಿ ಉಪನ್ಯಾಸಕರು
ಗುಲ್ಬರ್ಗ ವಿಶ್ವವಿದ್ಯಾಲಯ
ಕಲಬುರ್ಗಿ, ಕರ್ನಾಟಕ, ಭಾರತ

**Corresponding Author:**
**ಡಾ. ಶರಣಪ್ಪ ಬಸವಂತ**
ಕನ್ನಡ ಅತಿಥಿ ಉಪನ್ಯಾಸಕರು
ಗುಲ್ಬರ್ಗ ವಿಶ್ವವಿದ್ಯಾಲಯ
ಕಲಬುರ್ಗಿ, ಕರ್ನಾಟಕ, ಭಾರತ

# ಸುಕ್ಷೇತ್ರ ಹೇರೂರ (ಬಿ) ಗ್ರಾಮ ದೇವರು ಶ್ರೀ ಹುಲಿಕಂಠೇಶ್ವರ ಮಹಿಮೆ

## ಡಾ. ಶರಣಪ್ಪ ಬಸವಂತ

**ಪೀಠಿಕೆ**

ಕಲ್ಯಾಣ ಕರ್ನಾಟಕದಲ್ಲಿ ಹೆಸರು ಪಡೆದಿರುವ ಎಡದೊರೆಯ ನಾಡಾದ ಸಗರನಾಡು ಅನೇಕ ಶರಣರಿಗೆ ಹಾಗೂ ಪವಾಡ ಪುರುಷರಿಗೆ ನೆಲೆವೀಡಾಗಿದ್ದ ಇಂತಹ ಒಂದು ನಾಡಿನಲ್ಲಿ ಬಹಳ ಸತ್ಪುರುಷರ ತಪಸ್ಸಿನ ಸ್ಥಳದಲ್ಲಿ ಶಿವನ ಅನುಗ್ರಹ ಪಡೆದಂತಹ ಶೋಪಿ ಶರ್ಪೊದಿನ್ ಎಂಬ ಯೋಗಿಯವರ ಹತ್ತಿರ ನಾಲ್ಕೈದು ಜನ ಶಿಷ್ಯರಿದ್ದು, ಈ ಶಿಷ್ಯರಿಗೆ ದುಡಿದ ಫಲದಿಂದ ಆಶಿರ್ವಾದ ಮಾಡಿದನು. ಇವರಲ್ಲಿ ಒಬ್ಬ ಶಿಷ್ಯನಾದ ನೀಲಕಂಠನು ಆಧಿ ಶೇಷನ ಅವತಾರ ರೂಪಿಯಾಗಿದ್ದರಿಂದ ಗುರು ಶೋಪಿ ಶರ್ಪೊದಿನ್‌ನಿಗೆ ಅಶೀರ್ವಾದ ಮಾಡಲು ಆಗಲಿಲ್ಲ. ಏಕೆಂದರೆ ಶಿಷ್ಯನಾದ ನೀಲಕಂಠನು ಸಾಕ್ಷಾತ ಶಿವನ ಬಹುರೂಪಿಯಾಗಿದ್ದು; ಒಮ್ಮೊಮ್ಮೆ ಈತನು ಹುಲಿಯಾಗಿ, ಒಮ್ಮೊಮ್ಮೆ ಹಾವಾಗಿ, ಒಮ್ಮೊಮ್ಮೆ ತ್ರಿಮೂರ್ತ ಅವತಾರ ತಾಳಿ ನಿಲ್ಲುವನು ಈ ಒಂದು ಕಾರಣದಿಂದ ನೀಲಕಂಠನು ತನ್ನ ಗುರುವಿಗೆ ಸಾಕ್ಷಾತ ಪರಮಾತ್ಮನಾಗಿ ಕಂಡಿದ್ದರಿಂದ ಆಶೀರ್ವಾದ ಮಾಡಲು ಆಗಲಿಲ್ಲ.

ಮುಂದೆ ನೀಲಕಂಠನು ಮತ್ತು ಬಾಬಾ ಚೈತನ ಇವರಿಬ್ಬರು ಗುರು ಶೋಪಿ ಶರ್ಪೊದಿನ್‌ನ ಅಪ್ಪಣೆ ಪಡೆದು ದೇಶ ಸಂಚಾರ ಕೈಗೊಂಡು ನೆಲೋಗಿ ಗ್ರಾಮಕ್ಕೆ ಬಂದು ನೆಲೋಗಿಯ ಮುಂದಿರುವ ಭೀಮಾನದಿ ದಂಡೆಯಲ್ಲಿ ಕುಳಿತು, ಎರಡು ದಡ ಸೋಸಿ ಹರಿಯುವ ಗಂಗೆಯನ್ನು ದಾಟುವುದು ಹೇಗೆ ಎಂಬುದನ್ನು ಚಿಂತಿಸುತ್ತ ಕೊನೆಗೆ ಒಂದು ನಿರ್ಧಾರಕ್ಕೆ ಬಂದು, ಭಕ್ತಿವಂತರಾದ ಇವರು "ನೆನಿಅಕ್ಕಿ ನೆನಿಗಲ್ಲಿ ಕೊನೆಯ ಬಾಳಿ ಹಣ್ಣು ಗಂಗಾನದಿಯ ಉಡಿಯಲ್ಲಿ ಧರಿಸಿ ನಮಗೆ ದಾರಿಕೊಡು ತಾಯಿ" ಎಂದು ಬೇಡಿಕೊಂಡು ಕಂಬಳ ಗದ್ದಿಯನ್ನು ಗಂಗೆಯ (ಹೊಳೆಯ) ಮೇಲೆ ಹಾಸಿ ಅದರ ಮೇಲೆ ಕುಳಿತು ಹೊಳೆಯನ್ನು ದಾಟಿದ್ದು ಒಂದು ಪವಾಡವೆ ಎಂದು ಹೇಳಬಹುದು.

ಮುಂದೆ ಹೊಳೆಯಿಂದ ಮೈನಾಳ ಎಂಬ ಗ್ರಾಮಕ್ಕೆ ನಡೆದುಕೊಂಡು ಬಂದು ವಿಶ್ರಾಂತಿ ಪಡೆದು, ಒಬ್ಬರನೊಬ್ಬರು ಸಮಾಲೋಚನೆ ಮಾಡಿದರು. ನಂತರ ಬಾಬಾ ಚೈತನ್ಯನು "ನಾನು ಮೈನಾಳದಲ್ಲಿ ಇರುತ್ತೇನೆ. ನೀನು ಹೇರೂರ (ಬಿ) ಗ್ರಾಮಕ್ಕೆ ಹೋಗಿ ಠಿಕಾಣಿ ಮಾಡು ಅವಕಾಶ ಕಲೆತಾಗ ಒಬ್ಬರನೊಬ್ಬರು ಕೂಡಿ ಸಮಾಲೋಚಿಸೋಣ ಎಂದು ಮಾತನಾಡಿಕೊಂಡರು.

ಅಂದೆ ನೀಲಕಂಠನು ಬಾಬಾ ಚೈತನನ ಅಪ್ಪಣೆ ಪಡೆದು ಹೇರೂರ (ಬಿ) ಕ್ಷೇತ್ರಕ್ಕೆ ಬಂದು ಗ್ರಾಮದ ಹೊರ ವಲಯದಲ್ಲಿ ಒಂದು ಕಿಲೋಮಿಟರ ದೂರದಲ್ಲಿರುವ ನಿಂಗರಾಯನ ಗುಡಿಗೆ ಬಂದು ಅಲಿರುವ ನಿಂಗ್ರಾಯನಿಗೆ ತನ್ನ ಬಗ್ಗೆ ಹೇಳಿಕೊಂಡು "ನಾನು ಇಲ್ಲೆ ಇರಬೇಕಂತ ಅಂದುಕೊಂಡಿದ್ದೇನೆ. ನಿನ್ನ ಅಪ್ಪಣೆ ಇದ್ದರೆ ಇರುತ್ತೇನೆ ಇಲ್ಲದಿದ್ದರೆ ನಾನು ಮುಂದೆ ಪ್ರಯಾಣ ಬೆಳೆಸುತ್ತೇನೆಂದು" ಹೇಳಿದನು. ಇದಕ್ಕೆ ಪ್ರತಿಯಾಗಿ ನಿಂಗ್ರಾಯನು ತನಗೆ ನೀಲಕಂಠನು ಒಬ್ಬ ದೇವಾಂಶ ಸಂಭೂತನಾಗಿ ಕಂಡಿದ್ದರಿಂದ ತನ್ನಲ್ಲಿರಲು ಅನುಮತಿ ನೀಡಿದನು. ಮುಂದೆ ನೀಲಕಂಟನು ಹೇರೂರ (ಬಿ) ಗ್ರಾಮದಲ್ಲಿ ನಿಂಗ್ರಾಯನಿಂದ ಇರಲು ಅನುಮತಿ ಪಡೆದ ನಂತರ ನಿಂಗ್ರಾಯನ ಅಪ್ಪಣೆ ಪಡೆದು ಹೋಗಿ ಬರುತ್ತೇನೆಂದು ತಿಳಿಸಿ ಬೀದರ ರಾಜ್ಯಕ್ಕೆ ಪ್ರಯಾಣ ಬೆಳೆಸಿ ಬೀದರ ಕೋಟೆಗೆ ಬಂದು ತಲುಪಿದನು. ಅಲ್ಲಿನ ಜನರ ಹಾವ ಭಾವ ಭಕ್ತಿಯನ್ನು ವೀಕ್ಷಿಸಿ ಅಲ್ಲಿ ವಾಸವಾಗಿದ್ದ ಹಾಲುಮತ ಕುರುಬರು ಆಗಿರುವ ಭೀರಪ್ಪ ಮತ್ತು ನಿಂಗಪ್ಪ ಎಂಬ ಅಣ್ಣ ತಮ್ಮಂದಿರ ಭಕ್ತಿಗೆ ಮೆಚ್ಚಿ ತನ್ನ ಸೇವೆಗಾಗಿ ಅವರನ್ನು ಹೇರೂರ (ಬಿ) ಗ್ರಾಮಕ್ಕೆ ಕರೆದುಕೊಂಡು ಬರುವ ಉದ್ದೇಶದಿಂದ ತನ್ನ ಮಾಯಾಜಾಲದಿಂದ ನೀಲಕಂಠನು ಹುತ್ತನ್ನು ಸೃಷ್ಟಿಸಿಕೊಂಡು ಹುತ್ತದೊಳಗೆ ಕುಳಿತು ಬಿಟ್ಟನು.

ಹೀಗಿರಲು ನಿಂಗಪ್ಪನು ಒಂದು ನಾಯಿಯನ್ನು ಸಾಕಿದ್ದನು. ಈ ನಾಯಿಗೆ ನೀಲಕಂಠನು ಉಪದೇಶ ಮಾಡಿ ತನ್ನ ಪವಾಡದ ಮಹಿಮೆಯನ್ನು ತೋರಿಸಲು ಮುಂದಾದ. ಅದು ನಾಯಿ ಅಂದರೆ ನಾಯಿ ಅಲ್ಲ; ಅದು ಹುಲಿಯ ರೂಪದ ನೀಲಕಂಠನೇ ಆಗಿತ್ತು. ನೀಲಕಂಠನು ನಾಯಿಯಿಂದಲೆ ಬೀದರ ರಾಜನ ಕುದುರೆಯ ಮರಿಗೆ ಕಚ್ಚಿ ಸಾಯಿಸಿದನು, ಈ ಒಂದು ಕಾರಣದಿಂದ ಬೀದರ ರಾಜನು ಬೀರಪ್ಪ ಮತ್ತು ನಿಂಗಪ್ಪರವರ ಸಹ ಕುಟುಂಬಕ್ಕೆ ಮರಣ ದಂಡನೆ ನೀಡಲು ಡಂಗುರು ಹೊಡಿಸಿದನು. ಇದರಿಂದ ಭಯಭೀತರಾದ ಭೀರಪ್ಪ ನಿಂಗಪ್ಪ ಇವರು ತಮ್ಮ ಜೀವನಕ್ಕೆ ಹೆದರಿಕೊಂಡು ಜನರೆಲ್ಲ ಉಂಡು ನಿದ್ರಾಗ್ರಸ್ತರಾದಾಗ ಮದ್ಯರಾತ್ರಿಯಲ್ಲಿ ಸಹಕುಟುಂಬ ಪರಿವಾರದೊಡನೆ ಕುರಿಗಳನ್ನು ಹೊಡೆದುಕೊಂಡು ಬೀದರ ರಾಜ್ಯವನ್ನು ಬಿಟ್ಟು ಸಿಕಿಂದರಬಾದಿಗೆ ಬಂದು ಅಲ್ಲಿರುವ ಲಕ್ಷ್ಮೀ ಪೂಜೆ ಮಾಡಿ ಅಲಿಂದ ಮುಂದಕ್ಕೆ ಪ್ರಯಾಣ ಬೆಳೆಸಿದರು. ಅವರ ಹಿಂದೆ ಸಂರಕ್ಷಣಾ ಕರ್ತ ಪವಾಡ ಪುರುಷ ನೀಲಕಂಠನೇ ಇದ್ದನು. ಈ ಪೂಜಾರಿಗಳು ಕುಟುಂಬ ಸಮೇತ ಅಡವಿ ಅಡವಿ ತಿರುಗುತ್ತ ಒಂದು ದಿನ ಕೊಳದ ದಂಡೆಯಲ್ಲಿ ಒಂದು ದಿನ ಗುಡ್ಡ ಪರ್ವತದ ಗಡಿಯಲ್ಲಿ ಇದ್ದು ಸಂಕಟ ಪಡುತ್ತ ಕಷ್ಟ ಅನುಭವಿಸುತ್ತಾ ಪ್ರಯಾಣ ಬೆಳಸಿದ್ದು ಹೇಳಕ್ಕಾಗದು.

ಅವರು ಹಾಗೆಯೇ ತಿರುಗುತ್ತಾ ತಿರುಗುತ್ತಾ ಗುಲಬರ್ಗಾದ ಖಾಜಾ ಬಂದೇನವಾಜ ಎಂಬ ದೇವಾಂಶ ಸಂಭೂತರಿಗೆ ಬೆಟ್ಟಿಯಾಗಿ ಅವರ ಅನುಗ್ರಹ ಪಡೆದು "ನಿನಗೆ ಪ್ರಾಣಿ ಬಲಿ ಕೊಡುತ್ತೇವೆ ನಮಗೆ ಬಂದ ಕಷ್ಟ ದೂರು ಮಾಡಿರಿ" ಎಂದು ಬೇಡಿಕೊಂಡು, ಅವರ ಆಶೀರ್ವಾದ ಪಡೆದು ಅಲ್ಲಿಂದ ಮುಂದಕ್ಕೆ ಪ್ರಯಾಣ ಬೆಳಿಸಿದರು, ಮುಂದೆ ಬರುಬರುತ್ತಾ ಮಿಣಜಿಗಿ ಎಂಬ ಗ್ರಾಮಕ್ಕೆ ಬಂದು ಅಲ್ಲಿರುವ ಮಿಣಜಮ್ಮ ದೇವಿಗೆ ಕಾಯಿ ಕರ್ಪೂರ ಕೊಟ್ಟು "ತಾಯಿ ನಮಗೆ ಬಂದಂತ ಕಷ್ಟ ಬೈಲು ಮಾಡಮ್ಮ" ಅಂತ ಬೇಡಿಕೊಂಡು ಅಲ್ಲಿಂದ ಅಡವಿ ಅಡವಿ ತಿರುಗುತ್ತ ಸೌಳ ಹಳ್ಳರಾಯರ ಬಾವಿಗೆ ಬಂದು ಅಲ್ಲಿ ಒಂದು ದಿವಸ ಮನಸ್ಸಿಗೆ ನೆಮ್ಮದಿ ಪಡೆದುಕೊಂಡು ಅಲ್ಲಿಂದ ಮುಂದಕ್ಕೆ ಪ್ರಯಾಣ ಬೆಳೆಸಿದರು. ಹಾಗೆಯೆ ಅಡವಿ ಅಡವಿ ತಿರುಗುತ್ತಾ ಗಂಗನ ಎಂಬ ಹಳ್ಳಕ್ಕೆ ಬಂದರು ಹಳ್ಳದ ದಂಡೆಯಲ್ಲಿ ಕುಂತಿದ್ದ ಒಬ್ಬ ಜಟಾಧಾರಿ ಸಾದುವನ್ನು ಕಂಡು ಭೆಟ್ಟಿಯಾದರು. ಈ ಸಾದುನೇ ಬೀರಪ್ಪ ಮತ್ತು ನಿಂಗಪ್ಪರಿಗೆ "ನಿಮ್ಮ ಊರು ಯಾವುದು? ಇಲ್ಲಿಗೆ ಬರಲು ಕಾರಣವೇನು? ಮತ್ತು ನೀವು ಹೋಗುವುದು ಎಲ್ಲಿಗೆ"? ಎಂದು ಕೇಳಿದನು. ಇದಕ್ಕೆ ಪ್ರತಿಯಾಗಿ ಬೀರಪ್ಪ ಮತ್ತು ನಿಂಗಪ್ಪರು ಕೈಜೋಡಿಸಿ "ಮಹಾವ್ಯಕ್ತಿಗಳೇ ನಮ್ಮ ಪಾಲಿಗೆ ಈಗ ನೀವು ದೇವರು". ಅನ್ನುತ್ತಾ ತಮ್ಮ ಹಿಂದಿನ ವೃತ್ತಾಂತವಾದ; ನಾವು ಬೀದರ ರಾಜ್ಯದ ಪೂಜಾರಿಗಳು ಆಗಿದ್ದು. ನಾವಿಬ್ಬರು ಅಣ್ಣ ತಮ್ಮಂದಿರು ನಮ್ಮ ಮನೆಯಲ್ಲಿ ಒಂದು ನಾಯಿ ಸಾಕಿದ್ದೇವು, ಆ ನಾಯಿಯು ಬೀದರ ರಾಜನ ಕುದುರೆ ಮರಿಯನ್ನು ಕಚ್ಚಿ ಸಾಯಿಸಿದ್ದರಿಂದ ನಮ್ಮ ಸಹ ಕುಟುಂಬಕ್ಕೆ ನಾಳೆ ಮರಣದಂಡನೆ ಶಿಕ್ಷೆಕೊಡುತ್ತೇವೆಂದು ಡಂಗರು ಹೊಡಿಸಿದನು, ಈ ಸುದ್ದಿ ತಿಳಿದು ಭಯದಿಂದ ನಾವು ಜನರು ಉಂಡು ನಿದ್ರಾಗ್ರಸ್ತರಾದಾಗ ಸಹ ಕುಟುಂಬದೊಡನೆ ಅಡವಿ, ಗುಡ್ಡ, ವಾರಿಗಳಲ್ಲಿ, ಠಿಕಾಣಿ ಹುಡುತ್ತಾ ಇಲ್ಲಿಗೆ ಬಂದೇವ್ರಿ, ಆದರೆ ಈಗ ನೀವು ನಮಗೆ ದೇವರು, ಮಾಹಾನುಬಾವರೇ ನಮಗೆ ನೀವೆ ದಾರಿ ತೋರಿಸಿರಿ ಎಂದು ಕಣ್ಣೀರಿಟ್ಟು ಅವರ ಪಾದಕಮಗಳಿಗೆ ಎರಗಿದರು. ಈ ಒಂದು ಕಾರಣವನ್ನು ತಿಳಿದುಕೊಂಡ ಸಾದು ಪುರುಷನು "ನೀವು ಎಲ್ಲಿಗೆ ಹೋಗಬೇಡಿರಿ ಇಲ್ಲೆ ಪಕ್ಕದ ಹೇರೂರ ಗ್ರಾಮದ ಬಿಲ್ಬೋ–ರಾಯಬೋ ಎಂಬ ಇಬ್ಬರು ಅಣ್ಣ ತಮ್ಮಂದಿರುತ್ತಾರೆ, ಅವರ ಬೆನ್ನಿಗೆ ಬಿದ್ದು ಅವರ ಸಹಕಾರ ಪಡೆದುಕೊಳ್ಳಿರಿ ಅವರು ಭಾಳ ಸೂರರು" ಎಂದು ಸಾದು ಪುರುಷನು ಹೇಳಿದ ಮೇಲೆ ಈ ಪೂಜಾರಿಗಳು 'ಆ ಸೂರರನ್ನು ತೋರಿಸಿರಿ' ಎಂದು ಸಾದುವನ್ನು ಕೇಳಿಕೊಂಡರು. ಇದಕ್ಕೆ ಸಾದು ಪ್ರತಿಯಾಗಿ 'ನಡೆಯಿರಿ ತೋರಿಸುತ್ತೇನೆಂದು ಬಸವಣ್ಣನ ಗುಡ್ಡಕ್ಕೆ ಬಂದು, ಅಲ್ಲೆ ನಿಂತು ಬಿಲ್ಬೋ–ರಾಯಬೋ ವಾಸವಾಗಿರುವ ಕೋಳಿಯ ಕಟ್ಟಿ ಹಾಗೂ ಅವರ ಗುಂಪಾಗಳನ್ನು ತೋರಿಸಿ ಅಲ್ಲಿಗೆ ಹೋಗಿರಿ ಅವರಿಂದ ನೀವು ಆನಂದದಿಂದ ಇರುತ್ತೀರಿ ಅವರು ಬಹಳ ಭಕ್ತಿವಂತರು, ಸೂರರು ಎಂದು ಹೇಳಿ ಸಾದು ಪುರುಷನು ಮಾಯವಾದನು.

ಪೂಜಾರಿಗಳಿಬ್ಬರು ತಿರುಗಿ ನೋಡಿದಾಗ ಆ ಸಾದುಪುರುಷ ಕಾಣಿಸಲಿಲ್ಲ. 'ಏನು ಇದು ದೇವರ ಮಹಿಮಾ' ಎಂದು ಅಂದುಕೊಂಡು ಬಿಲ್ಬೋ–ರಾಯಬೋ ಇದ್ದ ಕಡೆಗೆ ನಡೆದರು ಈ ಒಂದು ಸಂದರ್ಭದಲ್ಲಿ ಬೀದರ ರಾಜ್ಯದ ದಂಡು ಇವರನ್ನು ಹುಡುಕುತ್ತಾ ಬಂದು ಮುತ್ತಿಗೆ ಹಾಕಿದರು, ಇದ್ದ ಕುರಿಮರಿಗಳು ಅಲ್ಲೇ ಬಿಟ್ಟು ಸೈನಿಕರಿಂದ ತಪ್ಪಿಸಿಕೊಂಡು ಅಲ್ಲಿಂದ ಓಡುತ್ತಾ ಓಡುತ್ತಾ ಸೂರರಾದ ಬಿಲ್ಬೋ–ರಾಯಬೋರ ಹತ್ತಿರ ಬಂದು ನಡೆದ ವೃತ್ತಾಂತವನ್ನು ಸಂಪೂರ್ಣವಾಗಿ ಹೇಳಿದರು. ಈ ವಿಷಯವನ್ನು ತಿಳಿದುಕೊಂಡ ಬಿಲ್ಬೋ–ರಾಯಬೋರ 'ಪೂಜಾರಿಗಳೇ ನೀವು ಇಲ್ಲೇ ಇರ್ರೀ' ಎಂದು ಹೇಳಿ ಬೀದರ ರಾಜನ ಸೈನ್ಯವನ್ನು ಹೆದರಿಸಲು ಗಾಂಡೀವ ಧನಸ್ಸು ಕೈಯಲ್ಲಿ ಹಿಡಿದು ಪಾಶುಪತಾಸ್ತ್ರಗಳನ್ನು ಠೇಂಕಾರ ಮಾಡುತ್ತಾ ಸೈನಕರಿಗೆ ಎದರುಗೈದರು. ಈ ಒಂದು ಸೈನ್ಯದಲ್ಲಿ ಸಾವಿರಾರು ಸೈನಿಕರಿದ್ದರು, ಈ ಎಲ್ಲಾ ಸೈನಿಕರನ್ನು ಹೆದರಿಸಿ ಓಡಿಸಿದರು. ಬಿಲ್ಬೋ–ರಾಯಬೋರಿಬ್ಬರು ಸೂರರಾಗಿದ್ದು, ಇವರಿಗೆ ಕಾಲಬೈರವನ ಅವತಾರ ಇತ್ತು ಬಿಲ್ಲು ವಿದ್ಯೆಯಲ್ಲಿ ಬಾರಿ ನಿಪುಣರು, ಹಾಗೂ ಅರ್ಜುನ–ಬಿಸ್ಮಾದಿಗಳಂತವರು ಇವರ ವರ್ಣನೆ ಹೇಳ್ಲಿಕೆ ಸಾಲದು ಬಾಣಗಳನ್ನು ಸುರಿಮಳೆಗೈದರು, ಇವರ ದೈರ್ಯ ಸಾಹಸಕ್ಕೆ ಬೀದರ ರಾಜನ ದಂಡು ಬೆನ್ನು ಕೊಟ್ಟು ಓಡಲು ಪ್ರಾರಂಭಿಸಿತು, ಇದಿಷ್ಟು ಆಗಿದ್ದು ನಾಟಿಕಾರ ಕಟ್ಟಿಮನಿಯವರ ಹೊಲದಲ್ಲಿ ಯುದ್ದ ಚ್ಯಾಲು ಆಗಿ ದಂಡಿನ ಬೆನ್ನು ಹತ್ತಿ ಹೇರರೂರ ಸೀಮೆಯನ್ನು ದಾಟಿಸಿ ತಮ್ಮ ಗುಂಪಾಕ್ಕೆ ಬಂದರು, ಯುದ್ಧದಲ್ಲಿ ಜಯಶೀಲರಾಗಿ ಬಂದಿದ್ದಕ್ಕೆ ಅವರ ಹೆಂಡಂದಿರು ಆರತಿಯನ್ನು ಬೆಳಗಿದರು. ನಂತರ ಹಾಲುಮತ ಬೀರಪ್ಪ ನಿಂಗಪ್ಪರು ಸೈನಿಕರಿಗೆ ಅಂಜಿ ಬಿಟ್ಟು ಬಂದ ಕುರಿಗಳನ್ನು ಹೊಡೆದುಕೊಂಡು ಅವರ ಕುಟುಂಬದವರನ್ನು ಕರೆದುಕೊಂಡು ಕೋಳಿಯ ಕಟ್ಟಿಗೆ ಬಂದರು.

ಬಿಲ್ಬೋ–ರಾಯಬೋ ಇವರು ಬೀರಪ್ಪ ಮತ್ತು ನಿಂಗಪ್ಪನವರು ಹಾಲುಮತದವರು ಎಂದು ತಿಳಿದು, ಅವರಿಗೆ ನಮಸ್ಕಾರ ಮಾಡಿದರು. ಅವರ ಹೆಂಡಂದಿರು ಮತ್ತು ಇವರ ಹೆಂಡಂದಿರು ಒಟ್ಟಿಗೆ ಸೇರಿ ಸಮಾಲೋಚನೆ ನಡೆಸಿದರು. ಇತ್ತ ಬೀರಪ್ಪ ಮತ್ತು ನಿಂಗಪ್ಪ ಇವರು ತಮಗೆ ಭೇಟಿಯಾದ ಸಾದುನ ವೃತ್ತಾಂತವನ್ನು ಹೇಳಿ 'ಸಾದು ನಿಮ್ಮ ಬೆನ್ನಿಗೆ ಬೀಳಿರಿ ಅವರ ಸಹಕಾರ ಪಡೆಯಿರಿ ಎಂದಿದ್ದಕ್ಕೆ ನಿಮ್ಮ ಹತ್ತಿರ ಬಂದಿವ್ರೀ ನಿಮ್ಮಿಂದಲೆ ಉಳಿದೇವ್ರಿ' ಎಂದರು. ಇದಕ್ಕೆ ಪ್ರತಿಯಾಗಿ ಬಿಲ್ಬೋ–ರಾಯಬೋರು 'ನಮ್ಮ ಬಾಜುನೇ ಇದ್ದುಬಿಡ್ರಿ ನಿಮ್ಮ ಕುರಿಗಳಿಗೆ ಬೇಲಿ ಹಾಕಿಕೊಡುತ್ತೇವೆ' ಎಂದು ಹೇಳಿದಲ್ಲದೇ ಮತ್ತೆ 'ಹೊಟ್ಟಿಲೆ ಹುಟ್ಟಿದ ಮಗುವನ್ನು ಕೊಡುತ್ತೀವಿ ಆದರೆ ಬೆನ್ನಿಗೆ ಬಿದ್ದವರಿಗೆ ಕೊಡುವುದಿಲ್ಲ' ಚಿಂತೆಯನ್ನು ಬಿಟ್ಟು ಸಂತೋಷದಿಂದ ಜೀವನದ ದೋಣಿ ಸಾಗಿಸಿರಿ ಎಂದರು. 'ನಿಮ್ಮ ಕೆಲಸ ನೀವು ನಮ್ಮ ಕೆಲಸ ನಾವು ಮಾಡುತ್ತೇವೆ. ನಾವು ಬೇಟೆಯಾಡುತ್ತೇವೆ ಗಿರಿಕಂದರ ತಿರುಗಾಡುತ್ತೇವೆ. ನಿಮ್ಮ ಆಜು–ಬಾಜು ಇರುತ್ತೇವೆ. ರಾತ್ರಿ ಆದ ಬಳಿಕ ನಿಮ್ಮ ಠಿಕಾಣಿಗೆ ನೀವು ಹೋಗಿರಿ ನಮ್ಮ ಠಿಕಾಣಿಗೆ ನಾವು ಹೋಗುತ್ತೇವೆ.

ಯಾವುದೇ ಆತಂಕ ಇಲ್ಲದೆ ಚಿಂತೆ ಬಿಟ್ಟು ಸಂತೋಷದಿಂದ ನಿದ್ದಿ ಮಾಡ್ರಿ ನಿಮಗೆ ಮತ್ತು ನಿಮ್ಮ ಕುರಿಗಳಿಗೆ ಪೈರುಕಾರರಾಗಿ ಇರುತ್ತೇವೆ. ಚಿಂತೆ ಬಿಟ್ಟು ನಿಶ್ಚಿಂತೆಯಿಂದ ಇದ್ದು ಬಿಡುರಿ ಎಂದು ಇನ್ನು ಮುಂದಿನ ಕೆಲಸ ನಮ್ಮದು ನಿಮ್ಮದು ಮತ್ತು ಇದಲ್ಲದೆ ನಿಮ್ ಹೆಂಡಂದಿರು ನಮಗೆ ಅಕ್ಕ–ತಂಗಿ–ತಾಯಿಯ ಸಮಾನ ನಮ್ಮ ಹೆಂಡಂದಿರು ನಿಮಗೆ ಅಕ್ಕ–ತಂಗಿ–ತಾಯಿಯ ಸಮಾನ' ಎಂದು ಒಬ್ಬರನ್ನೊಬ್ಬರು ಕೈ ಮೇಲೆ ಕೈ ಹಾಕಿ ವಚನ ಕೊಟ್ಟರು. ಹಾಗೆ ಅವರ ಹೆಂಡಂದಿರು ಗಂಡಂದಿರು ಹಾಗೂ ಇವರ ಹೆಂಡಂದಿರು ಗಂಡಂದಿರು ಅಣ್ಣ ತಮ್ಮ ತಂದೆಯ ಸಮಾನ ಅಂತ ಹೇಳಿ ಕೈ ಮೇಲೆ ಕೈ ಹಾಕಿ ವಚನಕೊಟ್ಟದ್ದು ವಿಶೇಷ, ನಿಮ್ಮ ಮೇಲೆ ಯಾವುದೇ ಗಂಡಾಂತರ ಬಂದರು ನಾವು ನೋಡಿಕೊಳ್ಳುತ್ತೇವೆ ನೀವು ಯಾವುದೇ ರೀತಿಯಿಂದ ಭಯಗ್ರಸ್ತರಾಗದೆ ನಿಶ್ಚಿಂತೆಯಿಂದ ಇರ್ರೀ ಎಂದಿದ್ದಕ್ಕೆ ಪರಸ್ಪರರು ಆ ಮಾತಿನಂತೆ ತಮ್ಮ ಸಂಸಾರವನ್ನು ಯಾವುದೇ ಅಳುಕು ಇಲ್ಲದೆ ಮುನ್ನಡಿಸಿಕೊಂಡು ಹೋಗುತಿದ್ದರು. ಹೀಗಿರುವಾಗ ಪೂಜಾರಿಗಳ ಕುರಿಯ ಹಿಂಡಿನಲ್ಲಿ (ಗುಂಪಿನಲ್ಲಿ) ಒಂದು ಹುಟ್ಟು ಸುಗುಡಿ (ಕಮಲಿ ಎಂಬ ಹೆಸರಿನ ಬಂಜಿ ಆಡು) ಇತ್ತು. ಈ ಆಡಿನ ಮಹಿಮೆ ಏನೆಂದರೆ, ಹಿಂಡಿನಲ್ಲಿರುವ ಆಡುಗಳು ಗರ್ಭಧರಿಸಿದಾಗ ಈ ಹುಟ್ಟು ಸುಗುಡಿ ಕೂಡ ಗರ್ಭಧರಿಸಿದ ಹಾಗೆ ಕಾಣುತ್ತಿತು ಮತ್ತೆ ಹಿಂಡಿನಲ್ಲಿರುವ ಆಡುಗಳು ಸಂತಾನ ಕ್ರಿಯೆ ಆದಾದ ಹೊಟ್ಟೆ ಸೊಟ್ಟಗಾಗಿ ಹೇಗೆ ಕಾಣುತ್ತದೋ ಹಾಗಯೇ ಈ ಹುಟ್ಟು ಸುಗುಡಿಯ ಹೊಟ್ಟೆಯು ಹಾಗೆ ಕಾಣುತ್ತಿತ್ತು. ಇದಲ್ಲದೆ ದಿನಾಲು ಒಂದು ಕೊಡ ಹಾಲು ಕೊಡುತ್ತಿತ್ತು ಕೋಳಿ ಕಟ್ಟಿಯಲ್ಲಿ ವಾಸವಾಗಿರುವರೆಲ್ಲರೂ ಹಾಲು ಮೊಸರು ಊಟ ಮಾಡುತ್ತಿದ್ದರು. ಹೀಗಿರುವಾಗ ಮುಂದೆ ಒಂದಾನೊಂದು ದಿವಸಸ ನೀಲಕಂಠನ ಮಹಿಮೆ ಹೇಳಲು ಅಸಾಧಾರಣ ರಾತ್ರಿ ಎಲ್ಲರು ಮಲಗಿದ ಬಳಿಕ ಮದ್ಯರಾತ್ರಿಯ ವೇಳೆಗೆ ಆಡು ಬೇಲಿ (ಹಟ್ಟಿ) ಯನ್ನು ಜಿಗಿದು ಅರ್ದಕಿಲೋಮಿಟರ ಓಡಿ ಬಂದು ಹುತ್ತಿನ ಮೇಲೆ ನಿಂತು ಜನ್ಮಕೊಟ್ಟ ಹಸು ತನ್ನ ಕರುವಿಗಾಗಿ ಹೇಗೆ ಹಂಬಲಿಸುತ್ತದೆಯೋ ಹಾಗೆಯೇ ಸುಗಡಿ ಆಡು ಕೂಡಾ ಹುತ್ತದೊಳಗಿನ ಏಳು ಹೆಡಿ ಹಾವಿಗೆ ಮ್ಯಾಹಾ... ಅಂತ ಹೇಳಿ ಕರೆದು ಹಾಲು ಉಣಿಸುತ್ತಿತ್ತು. ಈ ಏಳು ಹೆಡಿ ಹಾವು ಹಾಲು ಕುಡಿಯಲು ಹೊರಗೆ ಬಂದು ರತ್ನದ ಹರಳನ್ನು ತನ್ನ ತುರಾಯಿ (ಹೆಡೆ)ಯಿಂದ ತೆಗೆದು ಪಕ್ಕದಲ್ಲಿ ಇಟ್ಟು ಹಾಲು ಸವಿಯುತ್ತಿತ್ತು. ಹಾವು ಹಾಲು ಕುಡಿದ ನಂತರ ರತ್ನದ ಹರಳನ್ನು ತನ್ನ ತುರಾಯಿಯಲ್ಲಿ ಇಟ್ಟುಕೊಂಡು ಹುತ್ತಿನೊಳಗೆ ಹೋಗುತ್ತಿತ್ತು. ಈ ಸುಗಡಿ ಆಡು ಹಾವಿಗೆ ಹಾಲು ಕುಡಿಸಿ ಮೊದಲು ಬಂದಿರುವಂತಹ ದಾರಿಗೆ ಮರಳಿ ಹೋಗಿ ಬೇಲಿ (ಹಟ್ಟಿ)ಯನ್ನು ಜಿಗಿದು ಯಾರಿಗೂ ಗೊತ್ತಾಗದ ಹಾಗೆ ಕುಳಿತುಕೊಳ್ಳುತ್ತಿತ್ತು. ಮರುದಿನ ಬೆಳಗ್ಗೆ ಎದ್ದು ದಿನನಿತ್ಯದ ಕಾರ್ಯದಂತೆ ಬೀರಪ್ಪ ಮತ್ತು ನಿಂಗಪ್ಪರಿಬ್ಬರು ಕುರಿಗಳ ಹಿಂಡು ಬೇಲಿಯಿಂದ ಹೊರಗಡೆ ಬಿಟ್ಟು ಈದ ಆಡುಗಳ ಜೊತೆಗೆ ಸುಗುಡಿ ಆಡಿನ ಹಾಲು ಹಿಂಡಲು ಪ್ರಾರಂಭಿಸಿದರು. ಸುಗಡಿ ಕಮಲಿ ಮಲಿಯೊಳಗೆ ಹಾಲು ಇರುವುದಿಲ್ಲ ಮಲಿಯು ಸೊಟ್ಟಾಗಿದ್ದವು ನೋಡಿ ಇದೇನು ವಿಚಿತ್ರವೆಂದು ತಿಳಿದರು. ಇದರಂತೆ ದಿನಾಲು ಹುಟ್ಟು (ಕಮಲಿಯು) ಸುಗುಡಿ ಆಡು ದಿನಾಲು ಹಾಗೆಯೇ ಮಾಡಿತು. ಎಂಟು ಹತ್ತು ದಿನಗಳು ಕಳೆದವು. ಅಡವಿಗೆ ಕುರಿ ಮೈಸಲು ಹೋದ ಬೀರಪ್ಪ ನಿಂಗಪ್ಪರಿಬ್ಬರು ಸುಗುಡಿ ಕಮಲಿಯ ಹಾಲು ಯಾರು ಹಿಂಡಿಕೊಂಡು ಹೋಗುತ್ತಾರೆ? ಎಂದು ತಮ್ಮೊಳಗೆ ಮಾತನಾಡಿಕೊಳ್ಳುತ್ತಿದ್ದರು. ಬಿಲ್ಲೋ–ರಾಯಬೋ ಮಾತ್ರ ಸೂರರು ಇಲ್ಲಿ ಯಾರು ಬರುವುದಿಲ್ಲ. ಹಾಗಾದರೆ ಯಾರು ಹಿಂಡುತ್ತಾರೆ. ಪೂಜಾರಿಗಳು ಬಿಲ್ಲೋ–ರಾಯಬೋರವರಿಗೆ ಕೇಳಬೇಕೆಂದರೆ ಅವರಿಗೆ ಮೊದಲೆ ಭಯ ಅವರ ಬಗ್ಗೆ ಅರಿತುಕೊಂಡಿದ್ದೇವೆ. ಅವರಿಗೆ ದಬ್ಬಾ (ಅಪವಾದ) ಹೊರಿಸುವುದು ಸರಿಯಲ್ಲ ಅವರು ಸೂರರು ಮೊದಲೇ, ನಮಗೆ ಇಲ್ಲಿಗೆ ಯಾರು ಬರುವುದಿಲ್ಲ, ಅಂತ ಹೇಳಿದ್ರೂ ನಾವು ಒಂದು ವೇಳೆ ಬಿಲ್ಲೋ–ರಾಯಬೋರವರಿಗೆ ಕೇಳಿದರೆ ಬೀದರ ರಾಜ್ಯ ಬೇಕಾಗುತ್ತದೆ. ಇದು ಬ್ಯಾಡವಾಗುತ್ತದೆ ಎಂದು ಭಯದಿಂದ ಹೇಳುಲಕ್ಕೂ ಸಾಧ್ಯವಾಗದೆ ಮನದಲ್ಲಿಯೇ ದುಃಖಿಸಿದರು. ಹೀಗೆ ಕುರಿಗಳನ್ನು ಮೈಯಿಸಿಕೊಂಡು ಸಂಜೆಯ ವೇಳೆಗೆ ಎಂದಿನಂತೆ ಕುರಿಗಳನ್ನು ಬೇಲಿಯ (ಹಟ್ಟಿ) ಒಳಗಡೆ ಹಾಕುತ್ತಿದ್ದರು. ಸಂಜೆಯ ವೇಳೆಗೆ ಅವರಿಬ್ಬರು ಅಣ್ಣ ತಮ್ಮಂದಿರು ಮತ್ತು ಇವರಿಬ್ಬರು ಅಣ್ಣ ತಮ್ಮಂದಿರು ಸಂಸಾರದ ಮಾತುಗಳನ್ನು ಹಾಡಿ ಕುರಿಗಳನ್ನು ಹಟ್ಟಿಗೆ ಪೈರಿತನ (ಪಹರೆ ಕೆಲಸ) ಮಾಡಿ ತಮ್ಮ ತಮ್ಮ ಗುಂಪಾಕ್ಕೆ ಹೋಗಿ ಮಲಗಿಕೊಳ್ಳುತ್ತಿದ್ದರು. 'ಹೆಣ್ಣು ಮಕ್ಕಳ ಬಾಯಿಯಲ್ಲಿ ಮಾತು ನಿಂದ್ರಲ್ಲಾ. ಗಂಡಸರ ಕೈಯಲ್ಲಿ ಕೂಸು ನಿಂದ್ರಂಗಿಲ್ಲ' ಎಂಬ ಗಾದೆಯಂತೆ ಬಿಲ್ಲೋ–ರಾಯಬೋರ ಪತ್ನಿಯರು ನಿಂಗಪ್ಪ–ಬೀರಪ್ಪನ ಪತ್ನಿಯರಿಗೆ 'ನೀವು ದಿನನಿತ್ಯ ಹಾಲು ಮೊಸರು ಕೊಡುತ್ತಿದ್ದಿರಿ. ಎಂಟು ಹತ್ತು ದಿವಸವಾಯಿತು. ಹಾಲು ಮೊಸರು ಕೊಡುತ್ತಿಲ್ಲ ಏಕೆ?' ಎಂದು ಕೇಳಿದಾಗ ಬೀರಪ್ಪ ನಿಂಗಪ್ಪನವರ ಪತ್ನಿಯರು ಅದಕ್ಕೆ ಪ್ರತಿಯಾಗಿ 'ನಮ್ಮ ಸುಗುಡಿ ಆಡಿನ ಹಾಲು ಯಾರು ಹಿಂಡಿಕೊಂಡು ಹೋಗುತ್ತಾರೆ, ನಮಗೆ ತಿಳಿವಲ್ಲದಂಗ ಆಗ್ಯಾದ್ರೀ' ಎಂದು ಹೇಳಿದರು. ಇದಕ್ಕೆ ಪ್ರತಿಯಾಗಿ ಸೂರರ ಪತ್ನಿಯರು ಈ ವಿಷಯ ನಮ್ಮ ಗಂಡಂದಿರಿಗೆ ಹೇಳುತ್ತೇವೆ. ನಮ್ಮ ಗಂಡಂದಿರು ಸೂರರು ಎಂದು, ಅವರ ಗಂಡಂದಿರು ಶೂರತನದ ವಾಹಿಣಿಯನ್ನು ಹೇಳಿ ತಮ್ಮ ಗಂಡಂದಿರಲ್ಲಿಗೆ ಬಂದು ಎನ್ರೀ ಶೂರರೇ ಅವರ ಕುರಿಯ ಹಾಲನ್ನು ಯಾರು ಹಿಂಡಿಕೊಂಡು ಹೋಗುತ್ತಾರಂತೆ. ನೀವು ಬಾಳ ಶೂರರು ಅಂತಾ ಇದ್ದಾರೆ ಎಂದರು ಈ ಮಾತು ಕೇಳಿ ಬಿಲ್ಲೋ–ರಾಯಬೋರಿಗೆ ಸಿಟ್ಟು ಬಂತು. 'ಕುರಿ ಮೈಯಸಲಿಕ್ಕೆ ಹೋದ ಬೀರಪ್ಪ–ನಿಂಗಪ್ಪ ಬರಲಿ ಕೇಳುತ್ತೇವೆ' ಎಂದರು, ಸಂಜೆಯ ಕಡೆಗೆ ಬೀರಪ್ಪ–ನಿಂಗಪ್ಪ ಪೂಜಾರಿಗಳು ಕುರಿ ಹೊಡೆದುಕೊಂಡು ಬಂದು ಹಟ್ಟಿ ಒಳಗಡೆ ಹುಗಿಸಿದರು. ಬಿಲ್ಲೋ–ರಾಯಬೋರೀರ್ವರು ಪೂಜಾರಿಗಳಾದ ಬೀರಪ್ಪ–ನಿಂಗಪ್ಪನವರ ಹತ್ತಿರ ಬಂದು 'ಏನ್ರೀ ಪೂಜಾರಿ, ನಿಮ್ಮ ಕುರಿಗಳು ಹಿಂಡಿನಲ್ಲಿ ಒಂದು ಸುಗುಡಿ ಆಡು ಇದೆಯಂತೆ; ಹತ್ತು ಹದಿನೈದು ದಿವಸಗಳು ಆಯಿತಂತೆ; ಅದರ ಹಾಲು ರಾತ್ರಿ ಹೊತ್ತು ಹಿಂಡಿಕೊಂಡು ಹೋಗುತ್ತಾರಂತೆ ಸಿಟ್ಟಿನಿಂದ ಯಾರು ಹಿಂಡಿಕೊಂಡು ಹೋಗುತ್ತಾರೆ' ಎಂದು ಕೇಳಿದರು.

ಇದಕ್ಕೆ ಪ್ರತ್ಯುತ್ತರವಾಗಿ ಪೂಜಾರಿಗಳು ನಾವು ನಿಮಗೆ ಹೇಳಿಲ್ರೀ ಹಾಲು ಎಷ್ಟರ ಮಾತಂತ; ನಿಮ್ಮಿಂದಲೇ ನಾವು ಉಳಿದು ನಿಮ್ಮ ಸಹಕಾರ ನಾವು ಬಹಳ ಪಡೆದುಕೊಂಡಿವ್ರಿ, ನೀವು ನಮಗ ದೇವರು ಆಗಿ ಬಂದು ಕಾಪಾಡಿದಿರಿ. ಆದ್ರ ಹಾಲು ಎಷ್ಟರ ಮಾತ್ರೀ ಎಂದರು. ಈ ಒಂದು ಮಾತಿಗೆ ಬಿಲ್ಲೋ–ರಾಯಬೋರಿಬ್ಬರು ನಮ್ಮ ಭಯದಿಂದ ಅವರು ಅಂಜಿಕೊಂಡು ಹೇಳಲಿಕ್ಕಿಲ್ಲ ಅಂತ ತಿಳಿದುಕೊಂಡು ಒಬ್ಬರನ್ನೊಬ್ಬರು ಮಾತನಾಡಿಕೊಂಡು 'ಪೂಜಾರಿಗಳೇ ಚಾತುರ್ಮಾಸ ದೀಪಾವಳಿ ಚರ್ತುಥಿ ದಿನ ಇವತ್ತು ರಾತ್ರಿ ಬೆಳಗನ ಕುರಿಯ ಹಟ್ಟಿ ಕಾಯೋಣ ಎಂದು, ಹಟ್ಟಿ ಬಿಟ್ಟು ಸ್ವಲ್ಪ ದೂರದಲ್ಲಿ ಕುಳಿತು ಕಾಯದೊಡಗಿದರು. ನಡು ರಾತ್ರಿ ಹೊತ್ತಿನಲ್ಲಿ ಸುಗುಡಿ (ಕಮಲಿ) ಆಡು ಮ್ಯಾಹಾss ಎಂದು ಬೇಲಿ (ಹಟ್ಟಿ) ಹಾರಿ ರಸ್ತೆಯ ಕಡೆ ಓಡತೊಡಗಿತು. ಅದರ ಬೆನ್ನು ನಾಲ್ಕು ಮಂದಿ ಹತ್ತ ತೊಡಗಿದರು. ಸುಗುಡಿ ಆಡು ನಿಂಗರಾಯನ ಗುಡಿಯ ಪಕ್ಕದಲ್ಲಿರುವ ಹುತ್ತಿನ ಮೇಲೆ ನಿಂತು ಮ್ಯಾಹಾss ಅಂತ ಒದರಿತು. ಇತ್ತ ಇವರು ದೂರ ನಿಂತು ವಿಕ್ಷೀಸಿತೊಡಗಿದರು. ಹುತ್ತಿನೊಳಗಿದ್ದ ಏಳು ಹೆಡಿ ಹಾವು ಹೊರಗೆ ಬಂದು, ರತ್ನದ

"ಹರಳನ್ನು" ತನ್ನ ತುರಾಯಿಯಿಂದ ಹೊರಗೆ ತೆಗೆದು ಪಕ್ಕದಲ್ಲಿಟ್ಟು ಹಾಲು ಸವಿಯುತ್ತಿತ್ತು. ಹಾಲು ಕುಡಿದ ನಂತರ ಹಾವು ರತ್ನದ ಹರಳನ್ನು ತನ್ನ ತುರಾಯಿಯಲ್ಲಿ ಇಟ್ಟುಕೊಂಡು ಹುತ್ತಿನೊಳಗೆ ಹೋಯಿತು. ಇತ್ತ ಇವರು ನಾಲ್ಕು ಮಂದಿ ಕಲ್ಲಿನ ಮರಿಗೆ ನಿಂತು ನೋಡಿದರು. ಹಾವಿಗೆ ಹಾಲು ಕುಡಿಸಿ ಸುಗಡಿ ಆಡು ಮೊದಲು ಬಂದ ದಾರಿಯತ್ತ ಬೇಲಿಯ (ಹಟ್ಟಿಯ) ಕಡೆಗೆ ನಡೆಯಿತು. ಅವರೆಲ್ಲರು ಅದರ ಹಿಂದೆ ಬಂದರು, ಸುಗಡಿ ಆಡು ಬೇಲಿ ಹಾರಿ ಕುಳಿತು ಬಿಟ್ಟಿತು. ಈ ಒಂದು ಚಮತ್ಕಾರದ ಸಂಗತಿಯನ್ನು ಅವರ ಪತ್ನಿಯರೆದಿರು ವಿವರವಾಗಿ ತಿಳಿಸಿ ಹೇಳಿದರು.

ದೇವಾನು ದೇವ ನೀಲಕಂಠನೆ ಅವತರಿಸಿದ್ದಾನೆ. ನಾವೆಲ್ಲರು ಮುಂಜಾನೆ ಹುತ್ತಿನ ಗಡ್ಡಿಗೆ ಹೋಗಿ ಬರೋಣ , ಅಲ್ಲಿನ ವಿಸ್ಮಯವಾದ ವಿಶ್ವಂಬರ ಏನು ಅಂಬುದು ತಿಳಿಯೋಣ ಎಂದುಕೊಂಡು ಹಾಗೆಯೇ ಅವರು ಮುಂಜಾನೆ ಮಡಿಯಿಂದ ಹೋಗಿ ವೀಕ್ಷಿಸಿದರು, ಆ ಹುತ್ತಿನ ಗಡ್ಡಿಯಲ್ಲಿ ಒಂದು ಕಲ್ಲಿನ ಮೂರ್ತಿ, ಒಂದು ಕರಣಿ, ಒಂದು ಕಂಚಿನ ಸೂರ್ಯಪಾನ, ಮತ್ತು ಕಂಚಿನ ಮಾಯಿಮರತಪ್ಪ ಎಂಬ ಹೆಸರಿನ ಮೂರ್ತಿಗಳು ಸಿಕ್ಕಿವೆ, ಅವೆಲ್ಲವು ತೆಗೆದುಕೊಂಡು ಕೋಳಿಯ ಕಟ್ಟೆಗೆ ಬಂದರು ಬಿಲ್ಲೋ-ರಾಯಬೋರವರು ಆ ಎಲ್ಲಾ ಮೂರ್ತಿಗಳನ್ನು ತಮ್ಮ ಮನೆಯಲ್ಲಿಟ್ಟುಕೊಂಡು ಪೂಜೆ ಮಾಡುತ್ತಿದ್ದರು. ಆದರೆ ಇವರು ಬೇಟೆಗಾರರು ದಿನಂಪ್ರತಿ ಮೌಂಸಾಹಾರ ತಿನ್ನುತಿದ್ದರು. ಈ ಒಂದು ಕಾರಣದಿಂದ ಅವರ ಮನೆಯಲ್ಲಿ ಹೆಂಡರು ಮಕ್ಕಳು ಜ್ವರ, ಕಾಲರಾ ಬಂದು ವಾಂತಿ ಭೇದಿ ಪ್ರಾರಂಭವಾಗಿ ಮನೆಯಲ್ಲಿ ಹಾಸಿಗೆ ಹಿಡಿದಿದ್ದರು. ಬಿಲ್ಲೋ-ರಾಯಬೋರಿಬ್ಬರು ದಿನನಿತ್ಯದ ಕಾರ್ಯದಂತೆ ಬೇಟೆಯಾಡಲು ಹೋಗಿದ್ದರು, ಇವರಿಬ್ಬಗೆ ಸಾಕ್ಷಾತ ಒಬ್ಬ ಋಷಿ ಪ್ರತ್ಯಕ್ಷವಾಗಿ ಏ ತಮ್ಮ ಸೂರರೆ ನೀವು ಎಲ್ಲಿಗೆ ಹೋಗುತ್ತಿದ್ದೀರಿ' ಎಂದು ಕೇಳಿದನು ಇದಕ್ಕೆ ಪ್ರತಿಯಾಗಿ ಸೂರರು ಋಷಿಗೆ ಕೈಗಳನ್ನು ಜೋಡಿಸಿ ನಮಸ್ಕಾರ ಮಾಡಿದರು. ಈ ಒಂದು ಸಂದರ್ಭದಲ್ಲಿ ಋಷಿಯ ಬಿಲ್ಲೋ-ರಾಯಬೋರಿಬ್ಬರಿಗೆ ತಮ್ಮಾ ಸೂರರೆ ನೀವು ಗಂಗಾನ ಮಕ್ಕಳು ಮೇಲಿತ್ತರ ಭಕ್ತಿವಂತರರು ಬಿಲ್ಲು ವಿದ್ಯೆಯಲ್ಲಿ ನಿಪುಣರು ಎಂದನು. ಈ ಋಷಿಯ ಮಾತನ್ನು ಕೇಳಿದ ಸೂರರು 'ನಮ್ಮ ಮನೆಯಲ್ಲಿರುವ ಹೆಂಡರು, ಮಕ್ಕಳು ಜ್ವರದಿಂದ ಹಾಗೂ ವಾಂತಿ ಭೇದಿಯಿಂದ ನರಳಾಡುತ್ತಾ ಹಾಸಿಗೆ ಹಿಡಿದಿದ್ದಾರೆ ಮಹಾರಾಜರೆ ನೀವೆ ನಮಗೆ ಏನು ಮಾಡಬೇಕೆಂದು ಹೇಳಬೇಕು' ಎಂದು ಕೈ ಜೋಡಿಸಿ ನಿಂತಾಗ, ಇದಕ್ಕೆ ಪ್ರತಿಯಾಗಿ ಋಷಿಯು ಹೇಳುತ್ತಾನೆ ಸೂರರೆ ನಿಮಗೆ ಒಂದು ಕಲ್ಲಿನ ಮೂರ್ತಿ ಮತ್ತು ಇತರೆ ಅನೇಕ ಮೂರ್ತಿಗಳು ಸಿಕ್ಕಿವೆಯಂತೆ ಎಂದು ಕೇಳಿದಾಗ, ಅದಕ್ಕೆ ಅವರು ಹೌದು ಮಹಾಸ್ವಾಮಿ ಎಂದರು, ಆಗ ಋಷಿಯು 'ನಿಮ್ಮ ಹತ್ತಿರ ನಿಂಗಪ್ಪ ಮತ್ತು ಬೀರಪ್ಪ ಎಂಬ ಪೂಜಾರಿಗಳು ಇದ್ದಾರಲ್ಲ; ಆ ಮೂರ್ತಿಗಳ ಪೂಜೆಯು ಆ ಪೂಜಾರಿಗಳಿಗೆ ಸಲ್ಲುತ್ತದೆ. ಆದ್ದರಿಂದ ಸಿಕ್ಕಂತ ಎಲ್ಲಾ ಮೂರ್ತಿಗಳನ್ನು ಪೂಜಾರಿಗಳಿಗೆ ಪೂಜೆ ಮಾಡಲು ಕೊಡುರಿ ಅದಕ್ಕೆ ನೀವು ಸಾಕ್ಷಿಯಾಗಿ ಇರ್ರಿ ಎಂದು ಹೇಳಿ ಋಷಿ ಮಾಯವಾಗಿಬಿಟ್ಟನು ಅಲ್ಲಿಂದ ಬಿಲ್ಲೋ-ರಾಯಬೋರಿಬ್ಬರು ಮನೆಗೆ ಬಂದು ತಮ್ಮ ನಿತ್ಯ ಕರ್ಮವನ್ನು ತೊಳೆದುಕೊಂಡು ಋಷಿ ಹೇಳಿದಂತೆ ಹುತ್ತಿನ ಗಡ್ಡೆಯಲ್ಲಿ ಸಿಕ್ಕಂತ ದೇವರ ಎಲ್ಲಾ ಮೂರ್ತಿಗಳನ್ನು ಪೂಜಾರಿಗಳಿಗೆ ಕರಿಸಿ ನಿಮಗೆ ಪೂಜೆ ಮಾಡಲು ಸಲ್ಲುತ್ತದೆ ಎಂದು ಹೇಳಿಕೊಟ್ಟರು, ಮತ್ತು ಇದಕ್ಕೆ ನಾವು ಸಾಕ್ಷಿಯಾಗಿ ಇರುತ್ತೇವೆ ಎಂದು ಹೇಳಿದರು. ಅವರ ಮನೆಯಲ್ಲಿ ಎಲ್ಲರಿಗೂ ಆರಾಮಾಯಿತು. ಜ್ವರ, ಕಾಲರಾ, ವಾಂತಿ, ಭೇದಿಯಿಂದ ಅವರೆಲ್ಲರು ವಿಮುಕ್ತರಾದರು.

ಇದಾದ ನಂತರ ಎರಡು ಮೂರು ತಿಂಗಳ ಬಳಿಕ ಮತ್ತೆ ಒಬ್ಬ ಋಷಿಯು ಪೂಜಾರಿಗಳಿಗೆ ಪ್ರತ್ಯಕ್ಷವಾಗಿ 'ನೀವು ಪೂಜ ಮಾಡುವಂತ ಮೂರ್ತಿಗಳನ್ನು ನಿಂಗರಾಯನ ಗುಡಿಯಲ್ಲಿ ಇಟ್ಟು ಪೂಜೆ ಮಾಡಿರಿ' ಎಂದು ಹೇಳಿ ಮಾಯವಾದನು. ಅಂದಿನಿಂದ ಪೂಜಾರಿಗಳು ಮೂರ್ತಿಗಳನ್ನು ನಿಂಗ್ರಾಯನ ಗುಡಿಯಲ್ಲಿ ಇಟ್ಟು ಪೂಜೆ ಮಾಡತೊಡಗಿದರು. ಆ ಇಬ್ಬರು ಪೂಜಾರಿಗಳು ಗುಡಿಯ ಪೂಜೆಗೆ ನಿಂತರು. ಮತ್ತು ಅವರಿ ಪತ್ರಿಯನ್ನು ನಿಂಗ್ರಾಯದೇವರಿಗಿ ಏರಿಸಿ ಪೂಜೆ ಮಾಡತೊಡಗಿದರು. ನೀಲಕಂಠನು ನಿಂಗ್ರಾಯನಿಗೆ ನೀನು ಸಂರಕ್ಷಣಾಕರ್ತನು ಒಜ್ಜಿ ಹೊರುವವನು, ನಾನು ಪವಾಡ ಪುರುಷನು ಜನರಿಗೆ ನನ್ನ ಪವಾಡದಿಂದ ಅವರ ಸಮಸ್ಯೆಗಳನ್ನು ಕೇಳಿ ಪರಿಹಾರ ಮಾಡುತ್ತೇನೆಂದು ಒಬ್ಬರನ್ನೊಬ್ಬರು ವಚನಕೊಟ್ಟಿದ್ದರಿಂದ ಅಂದಿನಿಂದ ಇಂದಿನವರಿಗೂ ಅಂದಿನ ಪೂಜಾರಿಗಳ ವಂಶಸ್ತರಾದ ಇಂದಿನ ಹೂವಿನ ಮಳಗಿ ಪೂಜಾರಿಗಳು ಪೂಜ ಮಾಡುತ್ತ ರವಿವಾರ ಹಾಗೂ ಗುರುವಾರಕೊಮ್ಮೆ ವಿಶೇಷ ಪೂಜೆ ಕಟ್ಟಿ ಜನರ ಅಹ್ವಾಲುಗಳನ್ನು ಸ್ವೀಕರಿಸಿ ಅವುಗಳಿಗೆ ಪರಿಹಾರ ನೀಡುತ್ತಿದ್ದರು. ದೇವರ ಮೇಲೆ ಏರಿಸಿರುವ ಹೂವುಗಳು ಮೇಲಿಂದ ಕೆಳಗೆ ಬಿದ್ದಾಗ ಕೆಲಸ ಯಶಸ್ವಿಯಾಗುತ್ತದೆಂದು ಇಂದಿಗೂ ಜನರು ನಂಬಿಕೊಂಡಿದ್ದಾರೆ. ಹಾಗೆಯೇ ಪೂಜಾರಿಗಳು ಹುಲಕಂಠೇಶ್ವರನ ಪವಾಡ ಬಿತ್ತುತ್ತಾ ನಡೆದಿದ್ದಾರೆ. ಇದು ಜನರಿಗೆ ಸತ್ಯವಾಗಿ ಕಂಡು ಬಂದಿದೆ. ಪ್ರತಿ ಅಮಾವಾಸ್ಯಗೊಮ್ಮೆ ವಿಶೇಷ ಆರತಿ ಎತ್ತುವುದರೊಂದಿಗೆ ಅಂದು ಭಜನೆ ಕೀರ್ತನೆ ನಡೆಯುತ್ತವೆ. ವಿಶೇಷವಾಗಿ ರವಿವಾರ ಗುರುವಾರಕ್ಕೊಮ್ಮೆ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಗುಡಿಗೆ ಬಂದು ಹುಲಿಕಂಠೇಶ್ವರನ ಆಶೀರ್ವಾದ ಪಡೆದು ಪುನೀತರಾಗುವುದು ಇಂದಿಗೂ ನಮಗೆ ಕಾಣುತ್ತದೆ.

ಎತ್ತಣ ಮಾಮರ ಎತ್ತಣ ಕೋಗಿಲೆ
ಎತ್ತಣದಿಂದೆತ್ತ ಸಂಬಂಧವಯ್ಯ
ಎಂಬ ಅಲ್ಲಮ ಪ್ರಭುವಿನ ವಚನೋಕ್ತಿಯಂತೆ

ಬಿಲ್ಲೋ-ರಾಯಬೋ ಮತ್ತು ಬೀರಪ್ಪ-ನಿಂಗಪ್ಪ ಇವರೆಲ್ಲರು ಎಲ್ಲೋ ಹುಟ್ಟಿ ಎಲ್ಲೊ ಬೆಳೆದು ವಸಂತ ಕಾಲದ ಸಂದರ್ಭದಲ್ಲಿನ ಚಿಗುರು ಹೊಂದಿರುವ ಮಾವಿನ ಗಿಡಕ್ಕೆ ಮತ್ತು ಕೋಗಿಲೆಗೆ ಹೇಗೆ ಸಂಬಂಧವಾಗಿದಿಯೊ ಹಾಗೆಯೇ ಇವರೆಲ್ಲರ ಸ್ನೇಹ ಸಂಬಂಧವನ್ನು ಬೆಳೆದು ಇಂದಿನ ಆಧುನಿಕ ಜನಾಂಗದ ಪಿಳಿಗೆಗೆ ಸಹಕಾರ ನೀಡುವ ಬದುಕನ್ನು ಕಟ್ಟಿ ತೋರಿಸಿದ್ದಾರೆ.

ಹಾಗೆಯೇ ಇದೇ ಒಂದು ಗ್ರಾಮದ ಇನೋರ್ವ ಪವಾಡ ಪುರಷ ಸಾಕ್ಷಾತ್ ದೇವಾಂಶ ಸಂಭೂತ ಹಾಗೂ ಶಿವನ ಸ್ವರೂಪಿಯಾಗಿದ್ದ ನಿರಂಜಯ್ಯಸ್ವಾಮಿ ಎಂಬುವರು ಹೇರೂರ ಗ್ರಾಮದ ಹೊರವಲಯದಲ್ಲಿ ಗವಿಕಟ್ಟಿಸಿಕೊಂಡು ಇದ್ದರು, ಇವರು ಶ್ರಾವಣ ಮಾಸದಂದು ಪಲ್ಲಕ್ಕಿಯಲ್ಲಿ ಕೂತು ಊರಲ್ಲಿ ಮೆರೆಯುತಿದ್ದರು. ಇವರ ಸುತ್ತ ಛತ್ರಿ ಚಾಮರಗಳನ್ನು ಇದ್ದವು ಮತ್ತು ಇವರು ದಿನಂಪ್ರತಿ ವಿಶೇಷವಾಗಿ ಆಕಾಶಗಂಗೆಯನ್ನು (ಮಳೆನೀರಿನಿಂದ) ಕರೆದು ಸ್ನಾನ ಮಾಡುತ್ತಿರುವುದು ಒಂದು ಚಮತ್ಕಾರದ ಪವಾಡವೇ ಎಂದು ಹೇಳಬಹುದು. ಇವರು 12ನೇ ಶತಮಾನದ ಕೊನೆಯಲ್ಲಿ ಹಾಗೂ 13ನೇ ಶತಮಾನದ ಪ್ರಾರಂಭ ಕಾಲದ ಪವಾಡ ಪುರುಷರಾಗಿದ್ದು, ಇವರು ತಮ್ಮ ಕಾರ್ಯವನ್ನು ಹಾಗೇ ಮುನ್ನಡಿಸಿಕೊಂಡು ಬರುತ್ತಿದ್ದರು. ಇಂತಹ ಒಂದು ಕಾಲದ 1336ರ ಸಂದರ್ಭದಲ್ಲಿ (ನೀಲಕಂಠಶ್ವರನು) ಹುಲಕಂಠೇಶ್ವರನು ಅವತರಸಿದನು. ನಿರಂಜಯ್ಯನು ದಿನಾಲು ಆಕಾಶದ ಗಂಗೆಯನ್ನು ಕರೆದು ಸ್ನಾನ ಮಾಡುವ ವೇಳೆಯಲ್ಲಿ ಹುಲಿಕಂಠೇಶ್ವರನು ನೋಡಿ ಹೆಗಲ ಮೇಲಿನ ಜಾಡಿ ಕಂಬಳಿಯನ್ನು ಮೇಲಕ್ಕೆ ಹಾರಿಸಿದನು ಆಗ ಮಳೆ ನಿಂತು ಬಿಟ್ಟಿತು. ನಿರಂಜಯ್ಯನು ಹಿಂದಕ್ಕೆ ತಿರುಗಿ

ನೋಡಿದಾಗ ಹುಲಿಕಂಠೇಶ್ವರನಿದ್ದ 'ನೀನು ನನಕ್ಕಿಂತ ದೊಡ್ಡವನು, ನೀನು ಸಾಮಾನ್ಯನಲ್ಲ ದೇವಾಂಸ ಸಂಭೂತರಲ್ಲಿ ನೀನು ಒಬ್ಬನು' ಎಂದು ಹೇಳಿ 'ನಾನು ಶ್ರಾವನ ಮಾಸದಂದು ಡೊಳ್ಳು ಬಾಜಿ ವಾದ್ಯಗಳೊಂದಿಗೆ ಕುಂತು ಮೆರೆಯುವಂತಹ ಪಲ್ಲಕ್ಕಿಯಲ್ಲಿ ನೀನು ಇಂದಿನಿಂದ ಕುಂತು ಮೆರೆಯುತ್ತಿರು, ನಿನ್ನ ಪವಾಡವನ್ನು ಜನರಿಗೆ ತೋರಿಸು' ಎಂದು ಹೆಳಿದ್ದರಿಂದ ಅಂದಿನಿಂದ ಹುಲಿಕಂಠೇಶ್ವರನು ಪೂಜಾರಿಗಳ ಕೇರಿಯಲ್ಲಿರುವಂತಹ ಮಳಿಗೆಯಲ್ಲಿ ಪಲ್ಲಕ್ಕಿಯಲ್ಲಿ ಕುಂತು, ದೀಪಾವಳಿ ಯುಗಾದಿಗೊಮ್ಮೆ ಅನೇಕ ಆರತಿಗಳ ಜೊತೆಗೆ ಊರಲ್ಲಿ ಡೊಳ್ಳು ಬಾಜಿ ಇತ್ಯಾದಿ ವಾದ್ಯಗಳೊಂದಿಗೆ ಮೆರೆಯುತ್ತಾ ಜನರಿಗೆ ದರ್ಶನ ನೀಡಿ ಆಶೀರ್ವಾದ ಮಾಡಿ ಸಂಜೆ 6–30 ಗಂಟೆಗೆ ಊರಿನಿಂದ 4 ಕಿಲೋಮಿಟರ್ ದೂರದಲ್ಲಿರುವ ಭೀಮಾನದಿ ಗಂಗಸ್ಥಳಕ್ಕೆ ಹೋಗಿ ಪೂಜೆ ಮಾಡಿಕೊಂಡು ಪುನಃ ಊರಿಗೆ ಬರುತ್ತಾ ದಾರಿಯಲ್ಲಿ ಬಸಪ್ಪ ಪೂಜಾರಿ ಹಸರಗುಂಡಗಿ ಇವರು ತಮ್ಮ ದೇಸಾಯಿಯವರ ಹೊಲದಲ್ಲಿ ಪಲ್ಲಕ್ಕಿ ಕೂಡಿಸಿಕೊಳ್ಳಲ್ಲು ಒಂದು ಕಟ್ಟೆಯನ್ನು ಕಟ್ಟಿಸಿ ನೈವಿದ್ಯವನ್ನು ಕೊಟ್ಟು ದರ್ಶನ ಪಡೆದುಕೊಂಡು ದೇವರ ಜೊತೆಗೆ ಬಂದ ಅನೇಕ ಭಕ್ತರಿಗೆ ಅನ್ನಸಂತರ್ಪಣೆ ಮಾಡಿ ದೇವರಿಗೆ ಮತ್ತು ಭಕ್ತರಿಗೆ ತನ್ನ ಹೊಲದಿಂದ ಬೀಳ್ಕೊಡುತ್ತಾನೆ.

ಅನಂತರ ದೇವರು ಅಲ್ಲಿಂದ ಬಂದು ಊರ ಹೊರವಲಯದಲ್ಲಿ ದೇವರು ಕುಳಿತುಕೊಳ್ಳಲಕ್ಕೆ "ಪಾದಗಟ್ಟೆ" ಎಂಬ ಕಟ್ಟೆಯನ್ನು ಕಟ್ಟಿದ್ದಾರೆ. ಇಲ್ಲಿಗೆ ದೇವರು ಬಂದು ಕುಳಿತ ತಕ್ಷಣನೆ ಕರ್ಣಿಯನ್ನು ಊದುತ್ತಾರೆ, ಇದೆ ಸಮಯದಲ್ಲಿ ಊರಲ್ಲಿರುವ ಭಕ್ತರೆಲ್ಲರು ಉಪವಾಸವನ್ನು ಬಿಟ್ಟು, ದೇವರು ಕುಳಿತು ಕೊಂಡಿರುವ ಪಾದಗಟ್ಟೆಗೆ ಬರುತ್ತಾರೆ ಜೊತೆಗೆ ಮತ್ತೆ ಪೂಜಾರಿಗಳು ಎಲ್ಲಾ ಛತ್ರಿ ಚಾಮರಗಳು ತೆಗೆದುಕೊಂಡು ದೇವರ ಪಾಲ್ಕಿ ಹತ್ತಿರ ಹೋಗಿ ನಿಲ್ಲುತ್ತಾರೆ, ಕೆಲವು ಸಮಯದ ನಂತರ ಕುಂತು ಪೂಜಾರಿಗಳು ಕರ್ಣಿಯನ್ನು ಊದಿದ ನಂತರ ಭಕ್ತರೆಲ್ಲರು ಬಾಜಿ ಡೊಳ್ಳು ವಾದ್ಯಗಳೊಂದಿಗೆ ಬಾರಿಸುತ್ತಾ ಹೇಳಿಕೆ ಹೇಳುವ ಸ್ಥಳಕ್ಕೆ ಬಂದು ಈ ದೇವರ ಪೂಜೆ ಮಾಡುವ ಪೂಜಾರಿಗಳ ಮೈಯಲ್ಲಿ ದೇವರು ಬಂದು ಸಂತಾನ ಫಲ ಹಾಗೂ ಮಳೆ, ಬೆಳೆ ಹಾಗೂ ಊರಿನ ಆಗು ಹೋಗುಗಳ ಬಗ್ಗೆ ಹೇಳಿಕೆ ಹೇಳುತ್ತಾರೆ. ಒಂದು ದಿನ ಇಂತಹ ಒಂದು ಸಂದರ್ಭದಲ್ಲಿ ಹೇಳಿಕೆಯನ್ನು ಹೇಳುವಾಗ ಕೆಲವು ನಿಮಿಷಗಳು ನಿಂತು, ಮತ್ತೆ ಹೇಳಿಕೆ ಹೇಳುತ್ತಾನೆ. ನೆರೆದಿರುವಂತಹ ಎಲ್ಲಾ ಭಕ್ತಜನರು ಹೇಳಿಕೆ ನಿಲ್ಲಿಸಿದ ಬಗ್ಗೆ ತಮ್ಮೊಳಗೆ ಗುಜುಗುಜು ಮಾತನಾಡಿಕೊಳ್ಳುತಿರುವಾಗ ಮತ್ತೆ ದೇವರು ಹೇಳಿಕೆ ಹೇಳಲು ಪ್ರಾರಂಭಿಸಿದ. ಅದರ ಸಾರಾಂಶ ಇಂತಿದೆ:– ಕೆಲವು ದಿನಗಳ ಹಿಂದೆ ಗಂಗಮ್ಮ ಎಂಬ ಸಗರನಾಡಿನ ಹೆಣ್ಣು ಮಗಳಿಗೆ ಭೂತ (ಗಾಳಿ) ಬಡಿದುಕೊಂಡಿದ್ದರಿಂದ ಎಲ್ಲಾ ಕಡೆ ತಿರುಗಾಡಿದರು ಮೈಯೊಳಗಿನ ಭೂತ ಹೋಗಿರುವುದಿಲ್ಲ, 'ನಾನು ಭಸ್ಮವನ್ನು ಕೊಟ್ಟಿದ್ದೆ ಭೂತ ಬಡೆದುಕೊಂಡಿದ್ದ ನಿಂಗಮ್ಮಳಿಗೆ ಆರಮ ಆಗಿತ್ತು. ಮುಂದೆ ಇವಳಿಗೆ ಬಾಣೆಂತನ ಆಗುವ ಸಂದರ್ಭದಲ್ಲಿ ಎಪ್ಪಾ ಹುಲಿಸಿದ್ದ ನೀನೆಯಪ್ಪ ಆದಿಶೇಷ ನನ್ನನ್ನು ಕಾಪಾಡಬೇಕು ಅಂದಾಗ ನಾನು ಅಲ್ಲಿಗೆ ಹೋಗಿ ಬಾಣೆತನ ನೆರವೇರಿಸಿ ಬಂದ್ದಿದ್ದಿನಿ ಗಂಡು ಮಗು ಆಗಿದೆ. ಮುಂದಿನ ಯುಗಾದಿ ಹಬ್ಬಕ್ಕೆ ಬಂದು ನನಗೆ ಮಗನ ಜಡಿಕೊಡುತ್ತಾಳೆ ಅಂತಹ ಸಂಕಟದಲ್ಲಿರುವ ಭಕ್ತಳ ಜೀವ ಉಳಿಸಿ ಬಂದೆ. ಅದಕ್ಕಾಗಿ ನಿಮಗಾದರೂ ನನ್ನ ಮೇಲೆ ನಂಬಿಕೆ ಇಟ್ಟುವರಿಗೆ ಚೆನ್ನಾಗಿ ಉದ್ದರಿಸಿ ಮುನ್ನಡಿಸುತ್ತೇನೆ' ಎಂದು ಹೇಳಿ ಮತ್ತೆ ಅಲ್ಲಿಂದ ವಾದ್ಯಗಳೊಂದಿಗೆ ಮುಂದೆ ಬಂದು ಲಕ್ಷ್ಮೀದೇವಿ ತಂಗಿಯ ಮುಂದೆ ನಿಂತು ಊರಿನ ಸಮಸ್ಯೆಗಳು ಆಗುಹೋಗುಗಳನ್ನು ಜನರಿಗೆ ಹೇಳಿದಾಗ ಸಂತೋಷವಾಗುತ್ತದೆ. ಅಲ್ಲಿದ ವಾದ್ಯಗಳೊಂದಿಗೆ ಬಂದು ಸಿಡಗಟ್ಟೆ ಎಂಬ ಮುತ್ತಪ್ಪನ ಕಟ್ಟೆಯ ಮೇಲೆ ಕುಳಿತುಕೊಳ್ಳುತ್ತಾನೆ. ಇದೇ ಒಂದು ಸಂದರ್ಭದಲ್ಲಿ ಅನೇಕ ಭಕ್ತರು ತಮ್ಮ ಭಕ್ತಿಗೆ ಅನುಗುಣವಾಗಿ ಸಿಡಗಟ್ಟೆಯ ಮೇಲೆ ನಿಂತು ಸಿಡಗಾಯಿ (ಟೆಂಗಿನಕಾಯಿ) ಒಡೆಯುತ್ತಾರೆ. ಮುಂದೆ ಇಲ್ಲಿಂದ ರಾತ್ರಿ ನಾಲ್ಕು ಘಂಟೆಗೆ ತನ್ನ ಸ್ಥಾನಕ್ಕೆ ಹೋಗುತ್ತಾನೆ. ಅದರೊಂದಿಗೆ ಹರಕೆ ಹೊತ್ತವರು ಕಾಯಿ ಕರ್ಪೂರಗಳನ್ನು ತೆಗೆದುಕೊಂಡು ಜೊತೆಗೆ ಜೋಳದಿಂದ ಮಾಡಿದ ನುಚ್ಚುಬಾನ (ಕಿಚಡಿಯ)ದ ನೂರಾರು ಗಡಿಗೆಗಳನ್ನು ತೆಗೆದುಕೊಂಡು ಹೋಗಿ ಅಲ್ಲಿಗೆ ಬಂದಿರುವಂತ ಎಲ್ಲಾ ಭಕ್ತಾದಿಗಳಿಗೆ ಉಣಬಡಿಸುತ್ತಾರೆ.

**ಹುಲಿಕಂಠೇಶ್ವರನ (ನೀಲಕಂಠೇಶ್ವರನ) ಮುಖ್ಯ ಪವಾಡಗಳು**

ಪವಾಡವೆಂಬೆನೇ ಅಸಂಭಾವ್ಯ ಘಟನೆಗಳ !
ಪವಾಡವೆಂಬೆನೇ ಪ್ರಕೃತಿ ನಿಯಮವ ಮೀರಿದವುಗಳ !
ಪವಾಡವೆಂಬೆನೇ ಪ್ರತಿಷ್ಠೆ ಪ್ರಚಾರಗಳ !
ಪವಾಡವೆಂಬೆನೇ ಅತಿಮಾನುಷ ಕಾರ್ಯಗಳ !
ನಿನ್ನ ಸಾಕ್ಷಾತ್ಕಾರದ ನಿಲುವುಗಳೇ ಪವಾಡಪ್ಪ !
ಶ್ರೀ ಹುಲಿಕಂಠೇಶ್ವರ !

ಹುಟ್ಟು ಪವಾಡ ಪುರುಷ ಶ್ರೀ ಹುಲಿಕಂಠೇಶ್ವರ ಆದಿಶೇಷನ ಅವತಾರವು ಮೊದಲುಗೊಂಡು ಇಂದಿನವರೆಗೂ ಅಪ್ಪನ ಒಂದು ಪವಾಡವೇ ಆಗಿದೆ.

೧. ಹೇರೂರ ಗ್ರಾಮಕ್ಕೆ ಒಂದು ದಿನ ದೇವಾಂಶ ಸಂಭೂತನಾದ ಜನಿವಾರಸಿದ್ದನು, ಪ್ರಸ್ತುತ ಜನಿವಾರ ಗ್ರಾಮ ದೇವರು ತಾ. ಜೇವರ್ಗಿ ಇವನು ಹುಲಿಕಂಠೇಶಶ್ವರರ ಹತ್ತಿರ ಬಂದನು. ಆಗ ಅವರು ತಮ್ಮ ತಮ್ಮ ಪವಾಡಗಳ ಬಗ್ಗೆ ನಾ ಹೆಚ್ಚು ನೀ ಹೆಚ್ಚು ಎಂಬ ದೀರ್ಘವಾದ ಮಾತಿನ ಚಕಮಕಿಯಲ್ಲಿ ಜಿದ್ದು ಕಟ್ಟೇ ಬಿಟ್ಟರು ಅದೇನೆಂದರೆ ಊರ ಹೊರವಲಯದಲ್ಲಿದ್ದ ಒಂದು ದೊಡ್ಡ ಕಲ್ಲಿಗೆ ಕೈ ಬಡಿದು, ದೇಸಾಯಿಯವರ ಹೊಲಕ್ಕೆ ಯಾರು ಮೊದಲು ಹೋಗಿ ಕಣ (ದಾನ) ತೆಗೆದುಕೊಳ್ಳುತ್ತಾರೋ ಅವರೇ ಮೊದಲು ಗಂಗೆಯನ್ನು ಮೆನಿಯಬೇಕು, ಅಂದರೆ ಗಂಗೆಯಲ್ಲಿಗೆ ಹೋಗಿ ಪೂಜೆ ಮಾಡಿಕೊಳ್ಳುವುದು ಎಂದು ಅರ್ಥವಾಗುತ್ತದೆ. ಈ ಒಂದು ಪಣದಲ್ಲಿ ಹುಲಿಕಂಠೇಶ್ವರನು (ಮೊದಲು) ಹೋಗಿ ಕಣ (ದಾನ) ತೆಗೆದುಕೊಳ್ಳುವನು. ಇದಕ್ಕೆ ಮುಖ್ಯ ಕಾರಣವೇನೆಂದರೆ ಹುಲಿಕಂಠೇಶ್ವರನು ಆದಿಶೇಷನ ಅವತಾರಿ ರೂಪಿ ಆಗಿದ್ದರಿಂದ ಬೇಗ ಹೋಗಿ ಕಣ ತೆಗೆದುಕೊಂಡ. ಜನಿವಾರಸಿದ್ದನನ್ನು ಸೋಲಿಸಿದ್ದು ಒಂದು ಪವಾಡವೇ ಆಗಿದೆ, ಅಂದಿನಿಂದ ಇಂದಿನವರಿಗೂ ಹುಲಿಕಂಠೇಶ್ವರನೆ ಮೊದಲು ಗಂಗೆಯನ್ನು ಮೆನೆಯುತ್ತಾನೆ, ಜನಿವಾರ ಸಿದ್ದನು, ಹುಲಿಕಂಠೇಶ್ವರನು ಗಂಗೆಯನ್ನು ಮೊದಲು ಮೆನಿದು ಹೋಗುವವರಿಗೂ ಸಪ್ಪಳವಿಲ್ಲದೆ ಗುಡ್ಡದಲ್ಲಿ ಅಡಗಿ ಕುಳಿತುಕೊಂಡು ನಂತರ ಜನಿವಾರ ಸಿದ್ದನು ಗಂಗೆಯನ್ನು ಮೆನಿಯುತ್ತಾನೆ.

೨. ಒಂದು ದಿನ ಆಂದೇಲಿ ಸಕ್ರೆಪ್ಪಗೌಡನ 12 ಎಮ್ಮಿಗಳು ಹೇರೂರ ಗ್ರಾಮದವರಿಗೆ ಮೈಯ್ಕೋತು ಬಂದು, ಗಂಗಾಮತಸ್ಥನಾದ ತಿಪ್ಪಣ ಎಂಬುವನ ಹೊಲದಲ್ಲಿ ಬೆಳೆ ಮೈದಿದ್ದರಿಂದ ಅವೆಲ್ಲ ಎಮ್ಮಿಗಳನ್ನು ಮನೆಗೆ ಹೊಡೆದುಕೊಂಡು ಬಂದು ಕಟ್ಟಿ ಹಾಕಿದನು, ಆಂದೇಲಿಗೌಡನು ಈ ಸುದ್ದಿ ತಿಳಿದು ಎಮ್ಮಿಗಳನ್ನು ಗುರ್ತು ಹಿಡಿದು ಬಿಡಿಸಿಕೊಂಡು ಹೋಗಲು ಅನೇಕ ಜನರನ್ನು ಜೊತೆಗೆ ಕರೆದುಕೊಂಡು ಬಂದಿದ್ದ ಇವರು ಕಟ್ಟಿದ ಎಮ್ಮಿಗಳನ್ನು ನೋಡಿ ಗುರ್ತುಹಿಡಿದು ಬಿಡಿಸಿಕೊಂಡು ಹೋಗಲು ಬಂದು, ಇದೆ ಊರಿನ ನಿಂಗನಗೌಡ ಪೋಲಿಸ್ ಪಾಟಿಲ್‌ರವರ ಮನೆಗೆ ಹೋಗಿ ಎಮ್ಮಿಗಳೂ ಕಟ್ಟಿ ಹಾಕಿರುವಂತ ವಿಷಯವನ್ನು ತಿಳಿಸಿ ಸಮಾಲೋಚಿಸಿದನು, 'ಇತ್ತ ಕಡೆ ತಿಪ್ಪಣ್ಣನು ಸಿದ್ದಪ್ಪ ಪೂಜಾರಿ

ಹತ್ತಿರ ಬಂದು ಎಮ್ಮಿಗಳ ಸಂಗತಿ ಹಾಗೂ ಅಂದೇಲಿಗೌಡನ ವಿಷಯವನ್ನು ತಿಳಿಸಿದಾಗ ಸಿದ್ದಪ್ಪ' ಪೂಜಾರಿಯು ತಡಮಾಡದೆ ಕೈಯಲ್ಲಿ ಕಡ್ಲಗಿಯೊಳಗೆ, ಬೆಂಕಿ ಹಾಕಿಕೊಂಡು ತಿಪ್ಪಣ್ಣನ ಮನೆಗೆ ಹೋಗಿ ಕಟ್ಟಿದ ಎಮ್ಮಿಗಳಿಗೆ ಬಸ್ಮವನ್ನು ಹೊಡೆದಾಗ ಕರಿಯ ಎಮ್ಮಿಗಳು ಹೋಗಿ ಬಿಳಿಯ ಎಮ್ಮಿಗಳಾಗಿ ಪರಿವರ್ತನೆಯಾಗಿ ಆಂದೇಲಿಗೌಡನಿಗೆ ಕಂಡಿದ್ದು ಇದು ವಿಚಿತ್ರವಾದ ಪವಾಡವೆ ಆಗಿದೆ, ಈ ರೀತಿ ಎಮ್ಮಿಗಳು ಪರಿವರ್ತನೆ ಹೊಂದಿದ್ದರಿಂದ ನನ್ನ ಎಮ್ಮಿಗಳು ಅಲ್ಲ ಅಂತ ಹೇಳಿ ತಮ್ಮ ಊರಿಗೆ ನಡೆದನು.

೩. ನಂತರ ಇತ್ತ ಕಡೆ ತಿಪ್ಪಣ್ಣನು ಸಿದ್ದಪ್ಪ ಪೂಜಾರಿಯ ಹತ್ತಿರ ಹೋಗಿ ಅವರ ಪಾದಕಮಲಗಳಿಗೆ ಎರಗಿ 'ನನಗೆ ಆಂದೇರಿ ಗೌಡನಿಂದ ಪಾರು ಮಾಡಿದಿರಿ ಎಂದಾಗ' ಸಿದ್ದಪ್ಪ ಪೂಜಾರಿಯು ಆಗ ತಿಪ್ಪಣ್ಣನಿಗೆ 'ಕಟ್ಟಿರುವಂತ ಎಮ್ಮಿಗಳನ್ನು ಮಾರು, ಬಂದ ಹಣದಿಂದ ಒಂದು ಪಟ್ಟದ ಕುದುರಿಯನ್ನು ಖರೀದಿ ಮಾಡಿಕೊಂಡು ಬಾ', ಎಂದನು ಈ ಮಾತಿನಂತೆ 'ತಿಪ್ಪಣ್ಣನು ಯಾಕಾಗಲ್ಯಾಕ್ರಿ, ಮುತ್ಯಾ ಅಂದನು, ಆಗ ಪೂಜಾರಿಯು ತಿಪ್ಪಣ್ಣ ನೀನು ಮೊದಲು ಕಲಬುರ್ಗಿಗೆ ಹೋಗಿ ಬಾಜರದಲ್ಲಿ ಮಾರಾಟ ಮಾಡುವ ಅಂಗಡಿಯಲ್ಲಿ ಅನೇಕ ಕುದುರೆಗಳು ಇರುತ್ತವೆ. ಅಲ್ಲಿರುವ ಒಂದು ಕುದುರೆಗೆ ಹುಲಿಕಂತೇಶ್ವರನೇ ಅದೃಶ್ಯ ಶಕ್ತಿಯಿಂದ ಜಟಕಿ ಹೊಡೆದು ಆಲುಗಾಡಿಸುತ್ತಾನೆ. ನೀನು ಅದೇ ಕುದುರೆ ತರಬೇಕು' ಅಂದಾಗ ಯಾಕಾಗಾಲ್ಯಾಕ್ರಿ ಮುತ್ಯಾ ಅಂತಹ ಹೇಳಿ ತಿಪ್ಪಣ್ಣ ಕಲಬುರ್ಗಿಗೆ ಕುದುರೆ ಮಾರಾಟ ಮಾಡುವ ಅಂಗಡಿಗೆ ಅಂಗಡಿಗೆ ಹೋಗಿ ಕುದುರೆಗಳನ್ನು ನೋಡಿದ ಅಲ್ಲಿರುವಂತ ಒಂದು ಕುದುರೆಗೆ ಪೂಜಾರಿ ಹೇಳಿರುವಂತೆ ಕುದುರೆ ಅಲುಗಾಡಿ ಮೇಲೆ ಇರುವ ಕಂಚಿನ ಛತ್ರಕಿಯನ್ನು ಅಲುಗಾಡುತ್ತದೆ. ಇದನ್ನು ಕಣ್ಣಾರೆ ನೋಡಿದ ತಿಪ್ಪಣ್ಣನು ದಿಗ್ಭ್ರಾಂತನಾಗಿ ಇದೇನು ಆಶ್ಚರ್ಯ ಶಿವನಲೀಲೆ ಎಂದುಕೊಂಡು ಅಲುಗಾಡಿರುವಂತ ಕುದುರೆಯನ್ನು ಖರೀದಿ ಮಾಡಿಕೊಂಡು ಬಂದನು. ಇದೇ ಕುದುರೆಯು ಅಂದಿನಿಂದ ಇಂದಿನವರಿಗೂ ಪಲ್ಲಕ್ಕಿಯಲ್ಲಿ ಕುಂತು ದೀಪಾವಳಿ ಯುಗಾದಿಗೊಮ್ಮೆ ಊರಲ್ಲಿ ಮೆರೆಯುತ್ತದೆ.

೪. ಅಫಜಲಪೂರ ತಾಲೂಕಿನ ಚಿಣಮಗೇರಿ ಎಂಬ ಗ್ರಾಮದ ನಿಂಗಪಪ್ಪಗೌಡನಿಗೆ ಸಂತಾನ ಫಲ ಇರಲಿಲ್ಲ, ಆತ ಜೊತೆಗೆ ಕಡು ಬಡತನದ ವ್ಯಕ್ತಿಯು ಸಹ ಆಗಿದ್ದು, ಒಂದು ದಿನ ಹುಲಿಕಂತೇಶ್ವರನ ಪವಾಡವನ್ನು ಕೇಳಿ ದರ್ಶನ ಪಡೆಯಲು ಬಂದು, ಈ ದೇವರ ಪೂಜೆ ಮಾಡುವಂತ ಪೂಜಾರಿಯಾದ ಸಿದ್ದಪ್ಪ ಪೂಜಾರಿಯನ್ನು ಬೆಟ್ಟಿಯಾದನು. ಹುಲಿಕಂತೇಶ್ವರನು ಸಸಿದ್ದಪ್ಪ ಪೂಜಾರಿ ಮೈಯಲ್ಲಿ ಹೋಗಿ ನಿಂಗಪ್ಪಗೌಡನಿಗೆ 'ನಿನ್ನ ಹೊಲದಲ್ಲಿ ಮಟ್ಟಿಬಾರಿದಡದಲ್ಲಿ ಒಂದು ಬೇವಿನ ಗಿಡವಿದೆ. ಅದು ನಮ್ಮ ಮಳಿಗೆಗೆ ಕೊಡಬೇಕು' ಅಂದಾಗ ಯಾಕಾಗಾಲ್ಯಾಕ್ರಿ ಪೂಜಾರಿ ಅಂದನು, ಅದಕ್ಕೆ ಮತ್ತೆ ಪೂಜಾರಿಯು ಗೌಡ 'ನೀನು ಮೊದಲು ಗಿಡದ ಸುತ್ತ ಇರುವ ಬೇರು ಕತ್ತಿರಿಸು ಮುಂದೆ ಬರುವ ಗುರುವಾರದಂದು ಬೆಳಗ್ಗೆ ನಾಲ್ಕು ಗಂಟೆಗೆ ಹೋಗಿ ಗಿಡಕ್ಕೆ ಪೂಜಾ ಮಾಡಿ, ಅದಕ್ಕೆ ನಮಸ್ಕಾರ ಮಾಡಿ ಹಿಂದಕ್ಕೆ ದೂರ ಸರಿದು ನಿಲ್ಲಬೇಕು' ಎಂದು ಹೇಳಿದನು, ಈ ಮಾತಿನಂತೆ ನಿಂಗಪ್ಪಗೌಡನು ಚಿಣಮಗೇರಿಗೆ ಹೋಗಿ ಪೂಜಾರಿ ಹೇಳಿದಂತೆ ಮಾಡಿದನು ಅಷ್ಟರಲ್ಲೆ ಗಿಡ ಉರುಳಿ ಬಿತ್ತು, ಗಿಡದ ಬಡ್ಡಿಯ ಕೆಳಗೆ ಹೊನ್ನ ತುಂಬಿದ್ದ ಒಂದು ಹಾಂಡೆ ಮೇಲಕ್ಕೆ ಹಾರಿ ಬಂತ್ತು ಇದನ್ನು ತೆಗೆದುಕೊಂಡು ಗೌಡನು ಮನೆಗೆ ಹೋದನು, ಕಡೆದಿರುವಂತ ಗಿಡವನ್ನು ಹೇರೂರಿಗೆ ಹೇರಿಕೊಂಡು ಬಂದು ಮಳಿಗೆಯ ಆಸರೆಗೆ (ಹೇರಿಕೆ) ಹಾಕಿದ್ದಾರೆ. ಅತ್ತಗೌಡನಿಗೆ ಬಡತನ ಹಿಂಗಿತು ಸಂತಾನಫಲ ಕೂಡಾ ಆಯಿತು. ಈ ಘಟನೆಯಿಂದ ನಮಗೆ ಹುಲಿಕಂತೇಶ್ವರನ ಪವಾಡದ ಮಹತ್ವತೆ ಗೊತ್ತಾಗುತ್ತದೆ.

೫. ಸಗರನಾಡಿನ ನಿಂಗಮ್ಮ ಎಂಬುವಳು ಇದೇ ಹೇರೂರ (ಬಿ) ಗ್ರಾಮದ ಹೆಣ್ಣು ಮಗಳ ಮಗಳಾಗಿರುವಳು ಈಕೆಗೆ ಅಡಿವಿಗೆ ಕಟ್ಟಿಗೆ ಕಡಿಯಲು ಹೋದಾಗ ಭೂತ ಬಡೆದುಕೊಂಡಿತು, ಇದನ್ನು ಬಿಡಿಸಲು ಅನೇಕ ಬಾವಾಗಳ ಅಥವಾ ಸಾದು ಸಂತರಲ್ಲಿಗೆ ಹೋಗಿದ್ದರು, ಭೂತ ನಿಂಗಮ್ಮಳನ್ನು ಬಿಟ್ಟು ಹೋಗಿರುವುದಿಲ್ಲ. ಈ ನಿಂಗಮ್ಮನ ಮೈಯಲ್ಲಿರುವ ಭೂತ ಹೋಗಲಾಡಿಸಲು ಪ್ರಯತ್ನಿಸಿದ ಅನೇಕ ಬಾವಾಗಳಿಗೆ ಸಾದು ಸಂತರಿಗೆ ಭೂತ ಸಾಯಿಸಿತ್ತು, ಹೀಗೆ ಎಲ್ಲಾ ಕಡೆ ತೋರಿಸಿದರೂ ಭೂತ ನಿಂಗಮ್ಮಳಿಂದ ಬಿಟ್ಟು ಹೋಗಿರಲಿಲ್ಲ, ಈ ಕಾರಣದಿಂದ ಒಂದು ದಿನ ನೆರ ಮನೆಯವರು ನಿಂಗಮ್ಮನ ಮನೆಯವರಿಗೆ ನಿಮ್ಮ ಮನೆಯ ದೇವರ ಹತ್ತಿರ ಹೋಗ್ರಿ ಎಂದು ಹೇಳಿದಾಗ, ನಿಂಗಮ್ಮನ ಮನೆಯವರು ಸಗರನಾಡಿನಿಂದ ಹೇರೂರ ಗ್ರಾಮಕ್ಕೆ ಬಂದರು. ಇದೆ ವೇಳೆಗೆ ಮಳಿಗೆಯಲ್ಲಿ ಸಿದ್ದಪ್ಪ ಪೂಜಾರಿಯ ಹೇಳಿಕೆ ನಡೆದಿತ್ತು. ಭೂತ ಬಡೆದುಕೊಂಡ ನಿಂಗಮ್ಮಳು ಸಿದ್ದಪ್ಪ ಪೂಜಾರಿಯನ್ನು ಕಂಡು 'ಏ ಪೂಜಾರಿ ನಾನು ಎಷ್ಟೊ ಮಂದಿಗೆ ಖಲಾಸ ಮಾಡಿದ್ದೇನೆ. ನೀನೇನೋ ನನಗೆ' ಎಂದು ಚಟ್ಟನೆ ಚೀರಿ ನಿನಗೆ ಗಡ್ಡಾಕಿತ್ತಿ ಕೈಯಾಗ ಕೊಡುತ್ತೇನೆ ಎಂದು ಅಂದುದ್ದೆ ತಡ, ಭೂತ ತುಂಬಿಕೊಂಡಿದ್ದ ನಿಂಗಮ್ಮ ಪೂಜಾರಿಯ ಗಡ್ಡಕ್ಕೆ ಕೈ ಹಾಕಿದಾಗ, ಆಗ ಪೂಜಾರಿಯು ಕಡ್ಲಿಗಿ ಒಳಗಿನ ಬೆಂಕಿತೊಗೊಂಡು ಆ ಭೂತಕ್ಕೆ ಹೊಡೆದಾಗ ದೊಪ್ಪನೆ ನೆಲಕ್ಕೆ ಬಿದ್ದು ಇನ್ನು ಮುಂದೆ ನಾನು ಬರುವುದಿಲ್ಲ ಎನ್ನುತ್ತಿತ್ತು ಪೂಜಾರಿಯು ಇಷ್ಟಕ್ಕೆ ಬಿಡಲಿಲ್ಲ, ಆ ದೆವ್ವಿಗೆ ಬೆತ್ತಾತೊಗೊಂಡು ಹೊಡೆಯುತ್ತಾ ವಡ್ಡಹೊಲದವರಿಗೆ ಬೆನ್ನು ಹತ್ತಿದನು. ಅಲ್ಲಿಗೆ ಹೋಗಿ ಭೂತದಿಂದ ಕಲ್ಲಿಗೆ ಕೈಯನ್ನು ಬಡಿಸಿ (ಅಂದ್ರೆ ಪ್ರಮಾಣ ಮಾಡಿಸಿ) ಆ ಬಂಡೆಯನ್ನು ತಲೆಯ ಮೇಲೆ ಹೊರಿಸಿಕೊಂಡು ಮತ್ತೆ ಊರಿನ ಸಮೀಪ ಹೊರವಲಯದವರೆಗೆ ಬಂದು ಆ ಕಲ್ಲನ್ನು ಅಲ್ಲೇ ಇಡಿಸಿದನು. ಆಗ ದೆವ್ವ ನಿಂಗಮ್ಮಳನ್ನು ಬಿಟ್ಟು ಹೋಯಿತು. ಈ ಕಲ್ಲು ಇಂದಿಗೂ ಇದೆ ದೊಡ್ಡದಾಗಿ ಬೆಳೆದಿದೆ, ಈ ಕಲ್ಲು ಬಾರಿಸಿದಾಗ ಚಣ ಚಣ ಎಂದು ಸಪ್ಪಳ ಬರುವುದರಿಂದ ಇದಕ್ಕೆ ಚಣ ಚಣ ಕಲ್ಲೆಂದು ಜನರು ಇಂದಿಗೂ ಕರೆಯುತ್ತಾರೆ.

೬. ಅದರಂತೆ ಮುಂದೆ ಹೇರೂರ (ಬಿ) ಗ್ರಾಮದ ದೊಡ್ಡ ರೈತ ರಾಮರಾಯ ಬಾಬಾ ಕುಲಕರ್ಣಿಯವರು ಬಹಳಷ್ಟು ಶ್ರೀಮಂತ ಮನೆತನದವರು ಆದರೆ ಇವರಿಗೆ ಸಂತಾನ ಫಲ ಇರಲಿಲ್ಲ, ಹೀಗಿರುವಾಗ ಹುಲಿಕಂತೇಶ್ವರ ದೇವರ ಹೇಳಿಕೆ ಹೇಳುವಂತ ಮರೆಪ್ಪ ಮುತ್ಯಾ ಪೂಜಾರಿ ಇವರು ರಾಮರಾಯ ಬಾಬಾ ಅವರಿಗೆ ದಿನಾಲು ಹುಲಿಕಂರೇಶ್ವರ ದೇವರಿಗೆ ನಡೆದುಕೊಳ್ಳಲು ಹೇಳಿದನು. ಪೂಜಾರಿಯ ಅಪ್ಪಣೆಯಂತೆ ರಾಮರಾಯ ಬಾಬಾರು ದಿನಾಲು ಹುಲಿಕಂತೇಶ್ವರ ದೇವರಿಗೆ ನಡೆದುಕೊಳ್ಳಲು ಪ್ರಾರಂಭಿಸಿದರು, ಅವರಿಗೆ ಒಂದು ವರ್ಷದಲ್ಲಿಯೇ ಸಂತಾನ ಫಲವಾಯಿತು. ಹುಟ್ಟಿದ ಮಗುವಿಗೆ ಬಾಬುರಾವ ಎಂದು ನಾಮಕರಣ ಮಾಡಿದರು. ಪೂಜಾರಿಯ ಮಾತು ನಿಜ ಆಗಿದ್ದರಿಂದ ಹುಲಿಕಂತೇಶ್ವರನಲ್ಲಿ ಮಗನ ಜಡಿಯನ್ನು ತೆಗೆದು ಮುಂದೆ ಇವರು ಗರ್ಭಗುಡಿಯ ಮುಂದೆ ಚಂದ್ರ ಸಾಲಿ (ಪಡಸಾಲಿ) ಕಟ್ಟಿಸಿದರು. ಅಂದಿನಿಂದ ಇಂದಿನವರಿಗೂ ಯುಗಾದಿ, ದೀಪಾವಳಿಗೊಮ್ಮೆ ಒಂದು ಮಣ ಪೇಡಾ (ಸಿಹಿ) ಹಂಚುತ್ತಿರುತ್ತಾರೆ, ಮುಂದೆ ಇವರ ಮಗ ಬಾಬುರಾವ ಸರಕಾರಿ ವಕೀಲರಾಗಿ ಜಿಲ್ಲಾ ಕೋರ್ಟಿನ ನ್ಯಾಯಮೂರ್ತಿಯಾಗಿದ್ದು ಶ್ರೀ ಹುಲಿಕಂತೇಶ್ವರರ ಆಶೀರ್ವಾದದಿಂದಲೆ ಎಂದು ಜನ ಹೇಳುತ್ತಾರೆ.

೦೭. ಹಾಗೇಯೇ ಮುಂದೆ ನಿಂಗಪ್ಪ ಹಚ್ಚಡ ಎಂಬುವನು ಹೇರೂರ (ಬಿ) ಗ್ರಾಮದವನಾಗಿದ್ದು, ಇವನ ಹೊಲಕ್ಕೆ ಸಿದ್ದಪ್ಪ ಪೂಜಾರಿಯು ದಾನವನ್ನು ತೆಗೆದುಕೊಂಡು ಬರಲು ಹೋಗಿದ್ದ, ಆ ವೇಳೆಗೆ ನಿಂಗಪ್ಪಗೌಡ ಅಹಂಕಾರಭರಿತನಾಗಿ, 'ನಾವು ಮದನಾ

ಮುರುದಿಲ್ಲ ಕಣ ಕೊಡುವುದಿಲ್ಲ, ನಾಳೆ ಬಾ ಪೂಜಾರಿ ಎಂದು ಹೇಳಿದನು. ಈ ಮಾತಿನಂತೆ ಪೂಜಾರಿಯು ಹಿಂದಿರುಗಿದ ತಕ್ಷಣನೆ ನಿಂಗಪ್ಪಗೌಡನ ಎಂಟು ಎತ್ತುಗಳ ಕಣ್ಣುಗಳು ಕುರುಡಾದವು ತಕ್ಷಣವೆ ನಿಂಗಪ್ಪಗೌಡನು ಹುಲಿಕಂರೇಶ್ವರ ಗುಡಿಗೆ ಓಡಿ ಬಂದು ನೋಡಿದಾಗ ಪೂಜಾರಿಯು ಬೇರೆಯವರ ಹೊಲಕ್ಕೆ ದಾನ ತರಲು ಹೋಗಿದ್ದನು, ಏನೂ ತೋಚದ ನಿಂಗಪ್ಪಗೌಡನು, ಎಪ್ಪಾ ಹುಲಿಸಿದ್ದ ಪವಾಡ ಪುರುಷನೆ ನಮ್ಮ ಎತ್ತುಗಳಿಗೆ ಹೋಗಿರುವ ಕಣ್ಣಗಳು ಬಂದರೆ ನಮ್ಮ ಮನೆಯಿಂದ ಪಂಚದ ಆರತಿಯನ್ನು ದೀಪಾವಳಿ ಉಗಾದಿಗೊಮ್ಮೆ ನನ್ನ ವಂಶಪರಿಯಂತದವರಿಗೆ ಕೊಟ್ಟು ಕಳಿಸುತ್ತೇನೆಂದು ಬೇಡಿಕೊಂಡನು, ಅದೇ ವೇಳೆಯಲ್ಲಿ ಸಾಕ್ಷಾತ ಹುಲಿಕಂಠೇಶ್ವರನೇ ಪೂಜಾರಿಯ ರೂಪ ತಾಳಿ ಬೆಟ್ಟಿಯಾಗಿ ಬಸ್ಮ ಕೊಟ್ಟು 'ಕಣ್ಣು ಹೋಗಿರುವ ಎತ್ತುಗಳ ಕಣ್ಣಗಳಿಗೆ ಹಚ್ಚು' ಎಂದು ಹೇಳಿ ಕೊಟ್ಟು ಕಳಿಸಿದ ನಿಂಗಪ್ಪಗೌಡನು ಹುಲಿಕಂಠೇಶ್ವರನು ಕೊಟ್ಟಿರುವಂತ ಬಸ್ಮವನ್ನು ಎತ್ತುಗಳ ಕಣ್ಣುಗಳಿಗೆ ಹಚ್ಚಿದಾಗ ಕಣ್ಣುಗಳು ಬಂದವು. ಈ ಒಂದು ಕಾರಣದಿಂದ ಅಂದಿನಿಂದ ಇಂದಿನವರಿಗೂ ದೀಪಾವಳಿ ಯುಗಾದಿಗೊಮ್ಮೆ ಅವನ ಮನೆಯಿಂದ ಪಂಚದ ಆರತಿಗಳು ಬರುತ್ತಿರುವುದು, ನಿಜವಿರುತ್ತದೆ. ಆ ಪರಂಪರೆಯನ್ನು ನಾವು ಇಂದಿಗೂ ಕಾಣುತ್ತೇವೆ.

ಶ್ರೀ ಹುಲಿಕಂಠೇಶ್ವರನನ್ನು ಕುರಿತು ಕೃಷಿಕರು ತಮ್ಮ ಕೆಲಸದ ಸಂದರ್ಭದಲ್ಲಿ ಹಂತಿಯ ಪದವನ್ನು ಹಾಡುತ್ತಾ ಭಕ್ತಿಯಿಂದ ದೇವರನ್ನು ಸ್ಮರಿಸುತ್ತಾರೆ.

ಗಂಗಾನ ದಡಿಯಲ್ಲಿ
ಅಂಗಿ ಕಳದವನ್ಯಾರೊ
ಬಂಗಾರ ಹೊಳೆದಂಗ ಹೊಳಿತಾನ
ಬಂಗಾರ ಹೊಳೆದಂಗ
ಹೊಳಿತಾನ ಹುಲಿಸಿದ್ದ
ಗಂಗಾನ ಮೆನೆದು ಬರುತಾನ
ಗಂಗಾನ ಮೆನೆದು ಬಂದ
ಹುಲಿಸಿದ್ದನ ಹೇಳಿಕೆಯನ್ನೇಳಲಿ
ಬಂಜಿ ಇದ್ದವರಿಗೆ ತೊಟ್ಟಿಲು ಕಟ್ಟಿ ಕಳಿಶ್ಯಾನ
ಅಚ್ಚಾಕ ರಾಸಣಿಗಿ
ಇಚ್ಚಾಕ ಹೇರೂರ
ನಟ್ಟ ನಡಬರಕ ಶ್ರೀ ಗಂಗಾಸಿತಾಳ ನೀರ ಅಪ್ಪ ಹುಲಿಸಿದ್ದನ ಜಳಕಾಕ
ಸಾಸ ಬಾಳದಕಿನ ಲೇಸ ನನ ಹೇರೂರ
ತಾಸೆ ಹೊಯಿದಂಗ ಬಿಳಿಮಡ್ಡಿ
ತಾಸೆ ಹೊಯಿದಂಗ ಬಿಳಿ ಮಡ್ಡಿಯ ಮೇಲೆ ದೇಸಾಯ ಹುಲಿಸಿದ್ದ ನೆನದಾನ
ಹೋಗುತ್ತಾ ಎಡಕ್ಕಾಹಾನ
ಬರುತ್ತಾ ಬಲಕ್ಕಾಹಾನ
ಕೂಗಳತಿ ಮೇಲ ನೆನದಾನ
ಕೂಗಳತಿ ಮೇಲ ನೆನದಾನ ಹುಲಿಸಿದ್ದ ಕೂಗಿದರ ಧನಿಯ ಕೊಡುತ್ತಾನ
ಮಾಲ್ಯಾಗ ಮನಿಗ್ಯಾನ
ಹುವಿನ್ಯಾಗ ಹುದುಗ್ಯಾನ
ಮಗ್ಗ್ಯಾಗ ಕಣ್ಣ ತರದಾನ
ಮಗ್ಗ್ಯಾಗ ಕಣ್ಣ ತರದಾನ ಹುಲಿಸಿದ್ದ ಜಗ್ಗಿನ್ಯಾಗ ಆಡಿ ದಣದಾನ
ಸಾಲೋಟಗಿ ದಾರ್‍ಯಾಗ
ಸಾಲ ಹುಣಚಿಗಿಡ
ಎಣಿಶ್ಯಾಡತಾನ ಗಿಳಿಹಿಂಡ
ಎಣಿಶ್ಯಾಡತಾನ ಗಿಳಿಹಿಂಡ ಹುಲಿಸಿದ್ದ ಕುಣಿಶ್ಯಾಡತಾನ ಮರಿಗುದರಿ
ಅಟ್ಟರೆ ಅಡಗಿನೇ ಒಲ್ಲಾ
ಸುಟ್ಟರೆ ಸುಣ್ಣನೆ ಒಲ್ಲಾ
ಕಟ್ಟಿಸೆನೆಂದರೆ ಗುಡಿ ಒಲ್ಲಾ
ಕಟ್ಟಿಸೆನೆಂದರೆ ಗುಡಿ ಒಲ್ಲಾ ಹುಲಿಸಿದ್ದ ಬಟ್ಟಬಯಲಾಗ ನೆನೆದಾನ.

ಹೀಗೆ ಹುಲಿಕಂಠೇಶ್ವರನು ಎಲ್ಲಾ ವಿದದಿಂದ ಸಂರಕ್ಷಣಾಕರ್ತನಾಗಿ, ಪವಾಡಪುರುಷನಾಗಿ ಅರಸಿ ಬಂದ ಭಕ್ತರ ಸಮಸ್ಯೆಗಳು ಬೈಲು ಮಾಡಿ ಆಶೀರ್ವಾದ ಮಾಡಿ ಕಳಿಸುತ್ತಿದ್ದನು. ಇಂತಹ ಪವಾಡಪುರುಷನ ವಾಗಿಣಿ ದೇಶವಿದೇಶದತ್ತ ಹಬ್ಬಿತು, ಇಂತಹ ಪವಾಡಪುರುಷನ ವಾಗಿಣಿ ತಿಳಿದುಕೊಂಡು ಹಜರತ್ತಿನಿಂದ ಕಟ್ಟಿ ಪೀರಸಾಬ ಮತ್ತು ಯಲ್ಲಮ್ಮದೇವಿ ಮತ್ತು ಮಹಾಲಕ್ಷ್ಮೀ ಇವರೆಲ್ಲರೂ ಹುಲಿಕಂಠೇಶ್ವರನಿಗೆ ಸಾಥ್ ಕೊಡಲು ಬಂದು, ಅವರು ಕೂಡಾ ತಮ್ಮದೆ ಆದ ಪವಾಡಗಳು ಬಿತ್ತಿ ಹೆಸರು ವಾಸಿಯಾಗಿದ್ದಾರೆ. ಇಂದಿಗೂ ಜನತೆ ಅವರಿಗೂ ಕೂಡಾ ಅರುಸುತ್ತಿರುವುದು ನಾವು ಇಂದಿಗೂ ನೋಡುತ್ತೇವೆ.

ಇಂದಿಗೂ ಮಹಿಮಾ ಪುರುಷ ಶ್ರೀ ಹುಲಿಕಂಠೇಶ್ವರ ದೇವರ ಜಾತ್ರೆ ಯುಗಾದಿಗೊಮ್ಮೆ ನಡೆದು ದೇಶ ವಿದೇಶಗಳಿಂದ ಭಕ್ತರು ಬಂದು ದೇವರ ದರ್ಶನ ಪಡೆದು ಪುನಿತರಾಗುತ್ತಾರೆ. ಜಾತ್ರೆಗೊಮ್ಮೆ ಅನ್ನ ದಾಸೋಹ ನಡೆಯುತ್ತದೆ, ಜೊತೆಗೆ ಈ ಒಂದು ಜಾತ್ರೆಯಲ್ಲಿ ಕುಸ್ತಿ ಪಂದ್ಯ ನಡೆಯುತ್ತದೆ. ಈ ಪಂದ್ಯದಲ್ಲಿ ಗೆದ್ದವರಿಗೆ ಹಣ ಮತ್ತು ಬೆಳ್ಳಿಯ ಖಡ್ಗವನ್ನು ಕೊಡುತ್ತಿರುವುದು ಮತ್ತು ಪಂದ್ಯದ ಸಲುವಾಗಿ ಅನೇಕ ದೇಶ ವಿದೇಶಗಳಿಂದ ಕುಸ್ತಿ ಪಟುಗಳು ಆಗಮಿಸಿ ಕುಸ್ತಿಯ ಪಂದ್ಯದಲ್ಲಿ ತಮ್ಮ ಶಕ್ತಿ ಪ್ರದರ್ಶಿಸುವುದರ ಮೂಲಕ ಹಣ ಮತ್ತು ಬೆಳ್ಳಿಯ ಖಡ್ಗವನ್ನು ಗೆದ್ದು ದೇವರದರ್ಶನ ಪಡೆದು ತಮ್ಮ ತಮ್ಮ ದೇಶಗಳಿಗೆ ಹಿಂದಿರುಗುತ್ತಾರೆ.

ಹೀಗೆ ಸರ್ವಧರ್ಮ ಸಮನ್ವಯಗಳ ಸಂಕೇತದ ಬೀಡಾದ ಶ್ರೀ ಹುಲಿಕಂಠೇಶ್ವರ ಜಾತ್ರ ಉತ್ಸವ ದೀಪಾವಳಿ, ಯುಗಾದಿಗೊಮ್ಮೆ ನಡೆಯುವುದರ ಮೂಲಕ ಯಾವುದೇ ಜಾತಿ, ಜನಾಂಗ ಎನ್ನದೆ, ಎಲ್ಲರು ಸರಿಸಮಾನರು ನಾವೆಲ್ಲರು ದೇವರ ಮಕ್ಕಳು ಎಂಬ ಬಾವನೆಯಿಂದ ಹುಲಿಕಂಠೇಶ್ವರ ಉತ್ಸವದಲ್ಲಿ ಬಾಗಿಯಾಗಿ ಜಾತ್ರೆ ಯಸೆಸ್ವಿಯಾಗಿ ಪೂರೈಸುತ್ತಿರುತ್ತೇವೆ.

ಈ ಒಂದು ದೇವರ ಗರ್ಭಗುಡಿಯ ಮುಂದಿನ ಚಂದ್ರಸಾಲಿ (ಪಡಸಾಲಿಯ) ಸಿಕರದ ಮೇಲೆ ಕಲ್ಲಿನಿಂದ ಕೆತ್ತಿದ ಆಕಾರದ ಚಂದ್ರ ಇರುವುದರಿಂದ ನೋಡುಗರಿಗೆ ಇಸ್ಲಾಂ ದೇವರಾಗಿ ಕಾಣುತ್ತದೆ, ಒಳಗಡೆ ನಿಂಗ್ರಾಯ ಬಾಬಾ ಚೈತನ ಹಾಗೂ ಹುಲಿಕಂಠೇಶ್ವರರು ಇದ್ದಿರುತ್ತಾರೆ. ಇಲ್ಲಿ ಯಾವುದೆ ಮತಬೇದ ಮಾಡದೆ ಭಕ್ತರೆಲ್ಲರು ಹುಲಿಕಂಠೇಶ್ವರನ ಆಶೀರ್ವಾದ ಪಡೆದು ಪುನಿತರಾಗುತ್ತಿರುವುದು ಇಂದಿಗೂ ಕಂಡುಬರುತ್ತದೆ.

ಭರತ ಖಂಡದಲ್ಲಿ ಸಹಸ್ರಾರು ಸಂತರು, ಶರಣರು, ಮಹಾತ್ಮರು ಅವತರಿಸಿ ಬಂದು ಜನತೆಗೆ ಸನ್ಮಾರ್ಗ ತೋರಿದ್ದಾರೆ. ಕಾಯಕ-ದಾಸೋಹ-ಪ್ರಸಾದ ಮಹಿಮೆಯನ್ನು, ಆಯಾ ಕಾಲ-ದೇಶ ಪರಿಸರದಲ್ಲೆಲ್ಲಾ ಶಿವಾನುಭವಿಗಳು ಸಕಲ ಜನತೆಯ ಹಿತಕ್ಕಾಗಿ ಶ್ರಮಿಸಿದ್ದಾರೆ. ಅಂತಹ ಒಂದು ಭಕ್ತೋದ್ದಾರ ಕೈಗೊಂಡ ಶಿವನ ಬಹುರೂಪಿಯಾಗಿರುವ ಶ್ರೀ ಹುಲಿಕಂಠೇಶ್ವರ ಎಂಬ ಅವತಾರಿ ಪುರುಷರು ಕಲಬುರ್ಗಿ ಸಮೀಪದ ಹೇರೂರ (ಬಿ) ಗ್ರಾಮದಲ್ಲಿ 1336 (14ನೇ ಶತಮಾನ) ರಲ್ಲಿದ್ದರು, ಇವರ ಮಹಿಮೆ ಅಪಾರವಾದದ್ದು ಇಂದಿಗೂ ಕಂಡು ಬರುತ್ತಿದೆ. ಭಕ್ತಿ ಶ್ರದ್ದೆಯಿಂದ ನಡೆದುಕೊಳ್ಳುತ್ತಿರುವ ಭಕ್ತರಿಗೆ ಶ್ರೀ ಹುಲಿಕಂಠೇಶ್ವರರು

ಇಷ್ಟಾರ್ಥಗಳನ್ನು ಈಡೇರಿಸುತ್ತಿದ್ದುದ್ದು ಮನಗಂಡೆ ನಾನು ಈ ಲೇಖನ ಸೇವೆಗೆ ತೊಡಗಿರುವೆ, ನನ್ನ ಈ ಲೇಖನ ಬರವಣಿಗೆಗೆ ಸೂಕ್ತ ಸಹಕಾರ ನೀಡಿ ಶ್ರೀ ಹುಲಿಕಂಠೇಶ್ವರನ ಮಹಿಮೆಯನ್ನು ಭಕ್ತಿ ಪೂರ್ವಕವಾಗಿ ನನಗೆ ತಿಳಿಸಿ ಹೇಳಿರುವ ವಯೋವೃದ್ಧರಾದ–ಜ್ಞಾನವೃದ್ಧರಾದ ಶ್ರೀ ಶಾಮರಾವ ಚಂದ್ರಾಮಪ್ಪ ಕಟ್ಟಿಮನಿ ಅವರಿಗೆ ಋಣಿಯಾಗಿರುವೆ, ಹಾಗೆಯೇ ಮಹಿಮಾಶಾಲಿ ಶ್ರೀ ಹುಲಿಕಂಠೇಶ್ವರ ದೇವರಿಗೆ ನಾನು ಭಕ್ತಿಪೂರ್ವಕ ಪ್ರಣಾಮವನ್ನು ಸಲ್ಲಿಸುತ್ತೆನೆ.

**ಆಕರಗಳು**

೧. ಮಾತೆ ಮಾಣಿಕೇಶ್ವರಿ ಜೀವನ ಚರಿತ್ರೆ : ಲೇಖಕರು: ಎಂ.ಎಂ.ಚಂಡರಗಿ, ಪು–ಘು
೨. ಅಲ್ಲಮಪ್ರಭು ಅವರ ವಚನ: ಪಬ್ಲಿಕೇಶನ ಅನುಭವಮಂಟಪ (ಆಕರ: ಅಂತರಜಾಲತಾಣ)

**ಐತಿಹ್ಯಗಳು (ಸ್ಥಳ ಪುರಾವೆಗಳು)**

- ಮೈನಾಳ ಗ್ರಾಮದ ಶೇಖಸಾಬ ಮತ್ತು ಬೈಲಗುಡಿ ದೇವಸ್ಥಾನ
- ನಿಂಗರಾಯನ ದೇವಸ್ಥಾನ ಹೇರೂರ (ಬಿ) ಗ್ರಾಮದ ಹೊರವಲಯದಲ್ಲಿ
- ಹುತ್ತಿನಗಡ್ಡೆ (ಆದಿಶೇಷ ವಾಸಿಸುವ ಸ್ಥಳ)

**ವಸ್ತು ಪುರಾವೆಗಳು**

1. ಕಂಚಿನ ಸೂರ್ಯಪಾನ
2. ಕಂಚಿನ ಮಾಯಿ ಮರ್ತಪ್ಪ
3. ಕಂಚಿನ ಕರ್ಣಿ
4. ಕೈ ಬಡೆದ ಕಲ್ಲು (ಪ್ರಮಾಣ ಮಾಡಿದ ಕಲ್ಲು)
5. ಚಣ ಚಣ ಕಲ್ಲು (ಭೂತಕ್ಕೆ ಹೊರಿಸಿದ ಕಲ್ಲು)
6. ನಿರಂಜನ ದೇವಸ್ಥಾನ
7. ಬಿಲ್ಬೋ–ರಾಯಬೋ ಅವರ ಕೋಲಿ ಜನಾಂಗದ ಕಟ್ಟೆ
8. ಗಂಗನ ಹಳ್ಳ
9. ಹುಲಿಕಂಟೇಶ್ವರ ಮಳಿಗೆ (ಊರಲ್ಲಿ ಇರುವುದು)